೮. ಭೂಮ – ಅಲ್ಪಗಳು ಹಾಗೂ ನಮ್ಮ ಪರೀಕ್ಷಾ ಕೇಂದ್ರಿತ ಶಿಕ್ಷಣ

ಭೂಮ ಚಿಂತನೆ

ಗುರು : ಯಾವುದು ಭೂಮವೊ ಅದೇ ಸುಖ, ಅಲ್ಪದಲ್ಲಿ ಸುಖವಿಲ್ಲ. ಭೂಮವೊಂದೇ ನಿಜವಾದ ಸುಖ.

ಶಿಷ್ಯ : ಭೂಮ ಎಂದರೆ ಏನು?

ಗುರು : ಎಲ್ಲಿ ಇನ್ನೊಂದನ್ನು ಕಾಣುವುದಿಲ್ಲವೋ, ಇನ್ನೊಂದು ಅರಿವಿಗೆ ಬರುವುದಿಲ್ಲವೋ ಅದು ಭೂಮ.

-ತೈತ್ತಿರೀಯ ಉಪನಿಷತ್ತು

'ಭೂಮ' ಎಂಬುದು ವಸ್ತುಗಳ ಜಗತ್ತಿಗೆ ಹೊರತಾದ, ತತ್ತ್ವನಿಷ್ಠ ಬದುಕಿಗೆ ಸಂಬಂಧಪಟ್ಟ ವಿಷಯ. ವಸ್ತುಲಾಭವೊಂದೇ ಜೀವನದ ಚರಮಗುರಿಯಲ್ಲ, ಅದರಾಚೆಗೂ ಮನುಷ್ಯ ಜೀವನಕ್ಕೆ ಒಂದು ಗುರಿಯಿದೆ ಎಂಬ ವಿವೇಕವನ್ನು ಭೂಮಚಿಂತನೆ ನೀಡುತ್ತದೆ. ಪರೀಕ್ಷೆಗಳಲ್ಲಿ ಗಳಿಸುವ ಅಂಕಗಳೇ ಶಿಕ್ಷಣದ ಅಂತಿಮ ಉದ್ದೇಶ ಎಂದು ನಮ್ಮ ಇಡೀ ವ್ಯವಸ್ಥೆ ಪರಿಭಾವಿಸುತ್ತಿರುವಾಗ ಮಗು ತನ್ನ ಇತರ ಸುಪ್ತ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಬೆಳೆಸಿಕೊಳ್ಳಲು ಸಾಧ್ಯವೇ? ಸೃಜನಶೀಲತೆ ಸಹಜವಾಗಿ ಅರಳಲು, ವಿಕಾಸಗೊಳ್ಳಲು ನಮ್ಮ ಶಿಕ್ಷಣ ಸಹಕರಿಸುತ್ತದೆಯೇ? ನಿಜ ಹೇಳಬೇಕೆಂದರೆ ಪ್ರತಿಯೊಂದು ಮಗುವೂ ಅದಮ್ಯ ಸಾಧ್ಯತೆಯೊಡನೆ ಜನ್ಮ ತಾಳಿದರೂ ಈ ಸಾಧ್ಯತೆಗಳ ಒಂದು ಮಿಂಚು ನೋಟವೂ ಸಹ ಅದಕ್ಕೆ ಹೊಳೆಯದಂತೆ ತಡೆಯುವುದರಲ್ಲಿ ಶಿಕ್ಷಣ ಯಶಸ್ವಿಯಾಗಿದೆ. E=mc2 ಸೂತ್ರ ಆಗಬಹುದು ಅಥವಾ ಕನ್ನಡದ ಒಂದು ಮಹಾಕಾವ್ಯವಾಗಬಹುದು, ಇವೆಲ್ಲ ಬದುಕಿಗೆ ಸಂಬಂಧಪಡುವುದಿಲ್ಲ ಎಂಬ ಆಳವಾದ ಸಂದೇಶವನ್ನು ನಮ್ಮ ಇಂದಿನ ಪರೀಕ್ಷಾಕೇಂದ್ರಿತ ಶಿಕ್ಷಣ ಮಕ್ಕಳ ಮನಸ್ಸಿನಲ್ಲಿ ಬಿತ್ತುತ್ತಿದೆ. ಭೂಮ ಚಿಂತನೆ ಮನುಷ್ಯನ ಬದುಕನ್ನು, ಜೀವನ ಸಾಫಲ್ಯವನ್ನು ಸಮಷ್ಟಿ ಪ್ರಜ್ಞೆಗೆ ಏರಿಸುತ್ತದೆ. 'ನಾನು–ನನ್ನದು' ಎಂಬ ಸಣ್ಣ ವರ್ತುಲಗಳಲ್ಲೇ ಜೀವನ ಸ್ಥಗಿತವಾಗುವುದಿಲ್ಲ. ಆದರೆ ಭೂಮಪ್ರಜ್ಞೆ ಇಲ್ಲದ ಬದುಕು ಸ್ವಾರ್ಥಮಯವಾಗುತ್ತದೆ. ಬದುಕು ಎಂದರೆ

ಕಾರು ಬಂಗಲೆಗಳನ್ನು ಸಂಪಾದಿಸಿ ತನ್ನ ಪಾಡಿಗೆ ತಾನು ಬದುಕುವುದು ಎಂಬ ನಂಬಿಕೆಯನ್ನು ಧೃಢಪಡಿಸುತ್ತದೆ. ಸಂಘಜೀವನದ ಜವಾಬ್ದಾರಿಗಳೇನಿದ್ದರೂ ಕಾನೂನಿನಂತೆ ನಿರ್ವಹಿಸಬೇಕಾದ ಜವಾಬ್ದಾರಿಗಳು. ಕಾನೂನಿನ ಹೊರತಾಗಿಯೂ ವ್ಯವಸ್ಥೆಗೆ ಸ್ಪಂದಿಸುವ ಜೀವಂತಿಕೆಕೂಡ ಇದರ ಪ್ರಕಾರ ಬದುಕಿಗೆ ನೇರವಾಗಿ ಸಂಬಂಧಪಡುವುದಿಲ್ಲ ಅಥವಾ ಅನಿವಾರ್ಯವೂ ಅಲ್ಲ. $E=MC^2$ ಅಥವಾ ಮಹಾಕಾವ್ಯದ ಹಾಗೆ ಅನಿವಾರ್ಯವಲ್ಲದ್ದನ್ನು ಕುರಿತು ಚಿಂತಿಸುವ ಅಥವಾ ಅದಕ್ಕೆ ಸ್ಪಂದಿಸುವ ಗೊಡವೆ ತಾನೇ ಏಕೆ? ಈ ಬಗೆಯ ಗ್ರಹಿಕೆಯಿಂದಾಗಿ ನಮ್ಮ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಪರಿಸರವೂ ಎಲ್ಲಬಗೆಯ ಭೂಮಚಿಂತನೆಗಳಿಂದ ದೂರವಾಗೇ ಉಳಿಯುತ್ತಿದೆ. ಇದರ ಪರಿಣಾಮವಾಗಿ ಇಂದು ಮೂಲವಿಜ್ಞಾನ – ಗಣಿತಗಳು ಮೂಲೆಗುಂಪಾಗಿವೆ. ಮಾನವಿಕ ಶಾಖೆಗಳು ಕೇಳುವವರಿಲ್ಲದಂತಾಗಿವೆ. 'ಅನ್ವಯಿಕ' ಶಾಖೆಗಳಾದ ಇಂಜಿನಿಯರಿಂಗ್, ಬಯೋಟೆಕ್ನಾಲಜಿ, ವೈದ್ಯಕೀಯ ಶಾಖೆಗಳಿಗೆ ಮಾತ್ರ ಬೇಡಿಕೆ ಹೆಚ್ಚಾಗುತ್ತಿದೆ.

ಭೂಮ ಚಿಂತನೆಗೂ ಸಾಮಾಜಿಕ ಪ್ರಜ್ಞೆಗೂ ಗಾಢವಾದ ಸಂಬಂಧಗಳಿವೆ. ಪ್ರಯೋಜನ ದೃಷ್ಟಿಯನ್ನಷ್ಟೇ ಬದುಕಿನ ಸಾರವಾಗಿ ಪರಿಗಣಿಸುವ ಈ ಮಂದಿ ಕಣ್ಣಿದ್ದೂ ಕುರುಡರಂತೆ, ತಮ್ಮ ಸಮಾಜದ ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಗಳನ್ನು ನೋಡಿಯೂ ನೋಡದಂತೆ ತಮ್ಮ ಪಾಡಿಗೆ ತಾವು ಬದುಕುತ್ತಾರೆ. ಹೀಗೆ ಕಣ್ಣಿದ್ದೂ ಕುರುಡರಾಗಿರುವುದಕ್ಕೆ ಇವರು ತಮ್ಮ ಆತ್ಮಸಾಕ್ಷಿಗೆ ಕೊಡುವ ಸುಲಭ ಉತ್ತರ ಎಂದರೆ 'ಸರ್ಕಾರ ಇದೆಯಲ್ಲ! ' ಎನ್ನುವುದು. ಹಸಿದ ಹೊಟ್ಟೆಗಳ ಬಗ್ಗೆ ಚಿಂತಿಸಲು, ಮನೆ ಇಲ್ಲದವರಿಗೆ ಸೂರು ಒದಗಿಸಲು, ಕೆಲಸವಿಲ್ಲದವರಿಗೆ ಕೆಲಸ ಕೊಡಲು – ಹೀಗೆ ಎಲ್ಲಕ್ಕೂ ಸರ್ಕಾರ ಇದೆ. ನಾವು ಕಟ್ಟುವ ತೆರಿಗೆಯಲ್ಲಿ ಸರ್ಕಾರ ಇದನ್ನೆಲ್ಲ ಮಾಡಲಿ – ಇದು ನಮ್ಮ ಮಧ್ಯಮವರ್ಗ ಚಿಂತಿಸುವ ಬಗೆ. ಮೇಲ್ವರ್ಗಕ್ಕೆ ಇದಾವುದನ್ನೂ ಚಿಂತಿಸಲು ಬಿಡುವೇ ಇಲ್ಲ. ಅವರು ಇನ್ನೂ ಎತ್ತರದ ಮೆಟ್ಟಿಲುಗಳನ್ನು ಹತ್ತುವುದರಲ್ಲೇ ನಿರತರಾಗಿದ್ದಾರೆ. ಈ ಚಿಂತನೆಯ ಧಾಟಿಗೆ ಅನುಕೂಲವಾಗಿ ನಮ್ಮ ಶಿಕ್ಷಣದ ಆಶಯವೂ ಇದೆ. ಏಕೆಂದರೆ ಇಂದಿನ ಶಿಕ್ಷಣ ಎಂಬುದು ಬೇಡಿಕೆಗೆ ಅನುಗುಣವಾಗಿ ಮಾರ್ಕೆಟಿಂಗ್ ಮಾಡುವಂತಹ ಒಂದು ಮಾರುಕಟ್ಟೆಯ ಸರಕು. ಮಧ್ಯಮವರ್ಗ ಮತ್ತು ಮೇಲ್ವರ್ಗಗಳಿಗೆ ಈ ವಿಷಮ ಸನ್ನಿವೇಶ ನೇರವಾಗಿ ಅನುಭವಕ್ಕೆ ಬಂದರೂ ಕಾನೂನಿನ ಹೊರತಾಗಿ ಸ್ಪಂದಿಸಬೇಕಾದ ಅನಿವಾರ್ಯತೆಯನ್ನು ಮನಗಾಣುವುದಿಲ್ಲ. ಏಕೆಂದರೆ ಹೀಗೆ ಸ್ಪಂದಿಸುವ ಮೂಲಕ ಇಡಬೇಕಾದ ಮುಂದಿನ ಹೆಜ್ಜೆಗಳು ಅಷ್ಟೇನೂ ಲಾಭದಾಯಕವಾಗಿ ಇರುವುದಿಲ್ಲ. ಕೆಳವರ್ಗದವರು ತಮ್ಮ ವಸ್ತುಸ್ಥಿತಿಗೆ ಸ್ಪಂದಿಸುವ ಬಗೆಯೇ ಬೇರೆ. ಅವರಿಗೂ ಸಹ ತಮ್ಮ ಕಣ್ಣೆದುರಿಗೆ ಇರುವ ಮಧ್ಯಮ ವರ್ಗವೇ ಯಶಸ್ವಿ ಅನುಸರಣೀಯ ಮಾದರಿ. ಅದು ಹೇಗೆ ತನ್ನ ಸ್ವಹಿತರಕ್ಷಣೆ ಮಾಡಿಕೊಳ್ಳುತ್ತಿದೆಯೋ ಹಾಗೇ ಇವರೂ ಅದೇ ಮೆಟ್ಟಿಲುಗಳನ್ನು ಏರಿ ಅದೇ ಗುರಿ ತಲುಪಲು ಹೆಣಗುತ್ತಿರುತ್ತಾರೆ. ಇದರ ಲಾಭವನ್ನು

ನಮ್ಮ ಶಿಕ್ಷಣ ವ್ಯವಸ್ಥೆ, ಅದರಲ್ಲೂ ಖಾಸಗಿ ಶಿಕ್ಷಣ ಸಂಸ್ಥೆಗಳು ಚೆನ್ನಾಗಿ ಮಾಡಿಕೊಳ್ಳುತ್ತಿವೆ. ಇಂದು ಗ್ರಾಮೀಣ ಪ್ರದೇಶಗಳಲ್ಲೂ ತಲೆ ಎತ್ತುತ್ತಿರುವ ಇಂಗ್ಲಿಷ್ ಮಾಧ್ಯಮ ಕಾನ್ವೆಂಟ್‌ಗಳೇ ಇದಕ್ಕೆ ಸಾಕ್ಷಿ. ವಿವೇಕಾನಂದ ಕಾನ್ವೆಂಟ್‌ಗಳಿವೆ, ಭೈರವೇಶ್ವರ ಕಾನ್ವೆಂಟ್‌ಗಳೂ ಇವೆ. ಒಟ್ಟಿನಲ್ಲಿ ಇನ್ನೂ ಜನಗಳ ಮೇಲೆ ಪ್ರಭಾವ ಬೀರುತ್ತ ಅಲ್ಪಸ್ವಲ್ಪವಾಗಿ ಉಳಿದುಕೊಂಡಿರುವ ಸ್ಥಳೀಯ ಸಂಸ್ಕೃತಿನಾಮಗಳ ಜೊತೆ 'ಕಾನ್ವೆಂಟ್' ಎಂಬ ಹೊಸ ಭ್ರಮೆಯ ಹೆಸರನ್ನು ತಳುಕು ಹಾಕಿಬಿಟ್ಟರೆ ಸಾಕು, ಅದು ಮಧ್ಯಮವರ್ಗ ಸಾಮ್ರಾಜ್ಯದ ಹೆಬ್ಬಾಗಿಲು. ಇಂಗ್ಲಿಷ್, ಕಂಪ್ಯೂಟರ್ ಜೊತೆಗೆ ತನ್ನ ಸ್ವಾರ್ಥಮೂಲದ ಬಯಕೆಯನ್ನು ಸ್ವಲ್ಪವೂ ನಾಚಿಕೆಯಿಲ್ಲದೆ, ಅಪರಾಧಿ ಪ್ರಜ್ಞೆಯಿಲ್ಲದೆ ಹೇಳುವ, ಹೇಳುತ್ತ ಅದನ್ನೇ ಸಾಧಿಸುವ 'ಆತ್ಮವಿಶ್ವಾಸ' ವನ್ನು ಗಳಿಸುವುದೇ ಈ ಹೆಬ್ಬಾಗಿಲಿಗೆ ಇರುವ ಪ್ರವೇಶಾನುಮತಿ. ಈ ದೇಶದ ಶೇಕಡ ಅರವತ್ತರಷ್ಟು ಮಕ್ಕಳು ಹತ್ತನೆಯ ತರಗತಿಯನ್ನು ಪ್ರವೇಶಿಸುವ ಮುನ್ನವೇ ಶಾಲೆಯನ್ನು ತೊರೆಯುತ್ತಾರಾದರೂ ಅದರ ಬಗ್ಗೆ, ಆ ಮಕ್ಕಳ ಆವಶ್ಯಕತೆಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಸರ್ಕಾರವೂ ಈ ಮಧ್ಯಮವರ್ಗದ ಹೆಬ್ಬಾಗಿಲನ್ನು ಅಲಂಕಾರ ಮಾಡುತ್ತಲೇ ಕಾಲಕಳೆಯಿತ್ತಿದೆ.

ಅಲ್ಪಮನಸ್ಸುಗಳ ಅಭಿರುಚಿ

ಅಲ್ಪಮನಸ್ಸುಗಳು ಸೃಷ್ಟಿಸುವ ಅಭಿರುಚಿ ಸಮಾಜದ ಸರಾಸರಿ ಧೋರಣೆಯಾಗಿ ಪರಿಣಮಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ $E=MC^2$ ಅಥವಾ ಒಂದು ಮಹಾಕಾವ್ಯ ಜೀವನಕ್ಕೆ ಸಂಬಂಧಪಟ್ಟೀತು ಹೇಗೆ? ಪ್ರಶ್ನೆ ಏನೆಂದರೆ ಈ ಬಗೆಯ ಮಧ್ಯಮವರ್ಗದ ಜೀವನಮಾದರಿ, ಮನೋಧರ್ಮ ಮತ್ತು ಇದರಿಂದ ಹುಟ್ಟುವ ಜೀವನಸಾಫಲ್ಯಗಳು ಸುಸ್ಥಿರ ಸಮಾಜದ ನಿರ್ಮಾಣಕ್ಕೆ ಪೂರಕವಾಗಬಲ್ಲವೆ ಎನ್ನುವುದು. ಅದರಲ್ಲೂ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಜಾಗತೀಕರಣ–ಉದಾರೀಕರಣ ನೀತಿಗಳ ನಡುವೆ ನಾವು ಕಟ್ಟುವ ಸಮಾಜ ಹಾಗೂ ಅದರ ಪರಿಣಾಮಗಳನ್ನು ಕುರಿತು ಚಿಂತಿಸಿದರೆ ಈ ಮನೋಧರ್ಮದಿಂದ ಸುಸ್ಥಿರ ಸಮಾಜ ಸಾಧ್ಯವಿಲ್ಲ ಎಂಬುದು ಮೇಲ್ನೋಟಕ್ಕೇ ಕಾಣುತ್ತದೆ. ಮೊದಲನೆಯದಾಗಿ ಸಂವೇದನಾಶೀಲತೆಯೇ ಇರದ ಮಧ್ಯಮವರ್ಗವು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಭ್ರಷ್ಟಾಚಾರಕ್ಕೆ ಪೂರಕವಾಗಿ ಕೆಲಸ ಮಾಡುತ್ತದೆ. ಇದರ ಜೊತೆಗೆ ಮಧ್ಯಮವರ್ಗ ಸಮಾಜದ ಎಲ್ಲ ಸೌಕರ್ಯಗಳನ್ನು ಪಡೆದುಕೊಂಡು ವ್ಯವಸ್ಥೆಯ ಏರುಪೇರುಗಳ ಬಗ್ಗೆ ತಟಸ್ಥ ನಿಲುವು ತಳೆಯುವ ಸ್ವಾರ್ಥದಿಂದ ಕೂಡಿದೆ. ಇದು ದನಿಯೆತ್ತುವುದು ತನಗೆ ಸವಲತ್ತುಗಳು ಸಿಗದಾಗ ಮಾತ್ರ. ತನ್ನ ನೆರೆಹೊರೆಯವರಿಗೇ ಘೋರ ಅನ್ಯಾಯವಾದರೂ ಅದಕ್ಕೆ ಸ್ಪಂದಿಸದಷ್ಟು ಸ್ವಾರ್ಥಿಯಾಗಿರುತ್ತದೆ.

ಇದು ಕುಬ್ಜ ಮನಸ್ಸಿನ ಎಂದರೆ ಅಲ್ಪಮನಸ್ಸಿನ ಜೀವನದೃಷ್ಟಿ. ಭೂಮಚಿಂತನೆಯಲ್ಲಿ ಅಭಿರುಚಿ ಬೆಳೆಸಿಕೊಂಡ ಮನಸ್ಸಿಗೆ ತನ್ನ ಅಸ್ತಿತ್ವವನ್ನು ಸಮಷ್ಟಿಯ ಅಸ್ತಿತ್ವದೊಡನೆ, ಸಮಷ್ಟಿಯ ಏರಿಳಿತಗಳೊಡನೆ ಹೊಂದಿಸಿಕೊಳ್ಳುವ, ಕನಿಷ್ಟ ಪಕ್ಷ ಚಿಂತನೆಯಲ್ಲಾದರೂ ಸ್ಪಂದಿಸುವ ಮನಸ್ಸು ಹುಟ್ಟುತ್ತದೆ. ಆದರೆ ಕುಬ್ಜ ಮನಸ್ಸು ಕೇವಲ ಸ್ವಾರ್ಥ ವರ್ತುಲಗಳಲ್ಲಿ ಮಾತ್ರ ಗಿರಕಿ ಹೊಡೆಯುತ್ತದೆ. ಇದು ವ್ಯವಸ್ಥೆಯ ವಿರುದ್ಧ ಎಂದೂ ಸೆಟೆದು ನಿಂತು ವಿರೋಧ ಕಟ್ಟಿಕೊಳ್ಳುವುದಿಲ್ಲ. ಮೂರಕ್ಕೆ ಕಡಿಮೆ ಇಲ್ಲದ ಆರಕ್ಕೆ ಹೆಚ್ಚಿಲ್ಲದ ಪ್ರಾಕ್ಟಿಕಲ್ ಜೀವನ ನಡೆಸುವ ಮಧ್ಯಮ ವರ್ಗಕ್ಕೆ ಈ ಭೂಮಚಿಂತನೆ ವಸ್ತುವಾಗಲಾರದು.

ಶರಣಧರ್ಮ ಮತ್ತು ಪ್ರಕೃತಿ

ಮನಸ್ಸಿನ ವಿದ್ಯಮಾನಗಳು ಅಲ್ಪದ ಸೀಮೆಯನ್ನೆಂದೂ ದಾಟದಿದ್ದರೆ, ಭೂಮದ ಕನಸನ್ನಾದರೂ ಕಾಣದಿದ್ದರೆ ಸುಸ್ಥಿರ ಸಮಾಜ ಸಾಧ್ಯವಿಲ್ಲ. ಶರಣಧರ್ಮ – ಎಂದರೆ ನನಗಿಂತ ದೊಡ್ಡದೊಂದಿದೆ ಎಂದು ತಿಳಿದು ಅದಕ್ಕೆ ತಲೆಬಾಗಿ ನಡೆಯುವ ಧರ್ಮ – ಸುಸ್ಥಿರ ಸಮಾಜದ ಬುನಾದಿ. ಒಂದು ವೇಳೆ ನಾನು ಆಧುನಿಕ ಚಿಂತಕನಾಗಿದ್ದು ನನಗೆ ಧರ್ಮವೆಂಬ ಪದವೇ ಮುಜುಗರವನ್ನುಂಟುಮಾಡುತ್ತದೆ ಎಂದು ಭಾವಿಸುವುದಾದರೂ ನನ್ನ ಚಿಂತನಶೀಲತೆಯ ಹಿಂದಿರುವ ಪ್ರಾಮಾಣಿಕತೆಯೇ ಮನುಷ್ಯನಾಗಿ ನನ್ನ ಪರಿಮಿತಿಗಳನ್ನು ಎತ್ತಿ ತೋರುತ್ತದೆ, ತೋರಲೇಬೇಕು. ಇದೇ ಭೂಮಚಿಂತನೆಯ ಫಲ. ಸಮಗ್ರ ಪ್ರಕೃತಿ–ವಿಶ್ವಗಳ ರಹಸ್ಯದ ಒಂದು ಭಾಗವೂ ನನಗೆ ತಿಳಿದಿಲ್ಲ ಎಂಬ ಸತ್ಯವನ್ನು ಅಂಗೀಕರಿಸುವ ನಿರಹಂಕಾರ ಮನೋಧರ್ಮ ನನಗೆ ಮೂಡುತ್ತದೆ. ಇದು ನಿಜವಾದ ವಸ್ತುನಿಷ್ಠ ಚಿಂತನೆ. ನನ್ನ ಅರಿವಿಗೆ ಬಂದಿರುವುದಷ್ಟೇ ವಾಸ್ತವ, ಅದಕ್ಕೆ ಮಿಗಿಲಾದದ್ದು ಯಾವುದೂ ಇಲ್ಲ ಎಂದು ಭಾವಿಸಿದಾಗ ಗರ್ವ ಹುಟ್ಟುತ್ತದೆ. ಈ ಗರ್ವದ ಪರಿಣಾಮ – ನಾನು ಇಡೀ ಸೃಷ್ಟಿಯ ಸಕಲ ವಿದ್ಯಮಾನಗಳನ್ನೂ ನನ್ನ ಹಿಡಿತಕ್ಕೆ ಎಟುಕುವ ಸೂತ್ರಗಳಿಂದ ಕಟ್ಟಿ ಗೊಂಬೆಯಂತೆ ಕುಣಿಸುತ್ತೇನೆ ಎಂಬ ಹುಂಬತನ. ಇದೇ ಅಲ್ಪ ಚಿಂತನೆ. ಜಾಗತೀಕರಣದ ಮೂಲಬಂಡವಾಳವೂ ಇದೇ. ಇದೇ ನಿಜವಾದ ಅಧರ್ಮ. ಎಲ್ಲ ಅಧರ್ಮಗಳ ಮೂಲ. ಜಾಗತೀಕರಣದ ಅಲೆ ಈ ನಂಬಿಕೆಯನ್ನೇ ಪ್ರಚಾರ ಮಾಡುತ್ತ, ಅದನ್ನೇ ಬಂಡವಾಳಮಾಡಿಕೊಂಡು ಒಂದು ಮಿಥ್ಯಾ ಭರವಸೆಯನ್ನು ಹುಟ್ಟಿಸಿದೆ. ಇದನ್ನೇ ನಂಬುತ್ತಿರುವ ಮನುಜಕುಲ ಪ್ರಕೃತಿಯ ಬೇರುಗಳಿಗೇ ಕೈಹಾಕಿದೆ. ಈ ಅಧರ್ಮ ವಿನಾಶಕ್ಕೆ ಕಾರಣವಾಗುತ್ತದೆ. ಪರಿಸರವಿನಾಶದ ಮೂಲವೂ ಇದೇ. ಹಿರಣ್ಯಕಶಿಪುವಿನ ಗರ್ವವೂ ಇದೇ ಮೂಲದ್ದು. ವರವನ್ನು ಪಡೆಯುವುದೂ ತಂತ್ರಜ್ಞಾನವನ್ನು ಕೈವಶ ಮಾಡಿಕೊಳ್ಳುವುದೂ ಎರಡೂ ಒಂದೆ. ಸೃಷ್ಟಿಯ ಸಕಲವೂ ನನ್ನ ಆಳ್ವಿಕೆಯಲ್ಲಿದೆ, ನಾನು ಸಕಲ ಚರಾಚರಗಳನ್ನು ನಿಯಂತ್ರಿಸುವ ಸ್ವಾಮಿ ಎಂದು ಭಾವಿಸಿದಾಗ ಸೃಷ್ಟಿಕರ್ತ ಬಹಳ ಕಾಲ ಕಾದು ಕೊನೆಗೆ ಅವನನ್ನು

ಕೊಂದುಹಾಕಿದ. ಮಹಿಷಾಸುರನೂ ಹೀಗೆ. ಹೆಣ್ಣು ಏನು ತಾನೆ ಮಾಡೀತು ಎಂದು ಭಾವಿಸಿದ. ಸೃಷ್ಟಿಯಲ್ಲಿ ಯಾವುದೂ ಸಣ್ಣದಲ್ಲ ಎಂಬ ಭಾವನೆ ಹುಟ್ಟಲು ಭೂಮ ಚಿಂತನೆ ಅಗತ್ಯ. ಈ ಕಾರಣದಿಂದ ನಮ್ರತೆ – ವಿನಯಗಳು ಕೇವಲ ನೀತಿಕತೆಗಳಲ್ಲಿ ಕಂಡುಬರುವ ನೀತಿಪಾಠಗಳಷ್ಟೇ ಅಲ್ಲ. ಇವು ಮನುಕುಲ ಬದುಕುಳಿಯಲು ಅಗತ್ಯವಾದ ಮನೋಧರ್ಮಗಳು. ಈ ಮನೋಧರ್ಮಗಳು ಹುಟ್ಟಲು ನಮ್ಮ ನಡುವೆ ಭೂಮದ ಚಿಂತನೆ ಸಾಧ್ಯವಾಗಬೇಕು. ಪಂಪನ ಕಾವ್ಯಮಯವಾದ ಭೂಮ ಮನಸ್ಸು ತಾನು ಮರಿದುಂಬಿಯಾಗಿಯಾದರೂ ಪ್ರಕೃತಿಯೊಡನೆ ಒಂದಾಗಿರಲು ಬಯಸುತ್ತದೆ. ಅದು ಪ್ರಕೃತಿಯ ಅಧಿಪತಿಯಾಗಬೇಕೆಂದು ಬಯಸುವುದಿಲ್ಲ. ಈ 'ಆಧಿಪತ್ಯ'ದ ವಿಲಕ್ಷಣ ಆಸೆಗಳು ಅಲ್ಪ ಮನಸ್ಸಿಗೆ ಮಾತ್ರ ಸಾಧ್ಯ.

ಅಧ್ಯಾತ್ಮಿಕ ದೃಷ್ಟಿಯಿಂದ ಹೇಳುವುದಾದರೆ ಅಲ್ಪದ ಅವಲಂಬನೆಯಿಂದ ಬಿಡುಗಡೆಯಾಗುವುದಕ್ಕೆ ಭೂಮ ಚಿಂತನೆ ಬೇಕು. ನಿರಾವಲಂಬನ ಮನಸ್ಸಿನ ಭೂಮವು ಪ್ರತಿಯೊಂದರಲ್ಲೂ ಭೂಮವನ್ನೇ ನೋಡುತ್ತದೆ. ಆ ಒಂದು ಸ್ಥಿತಿಯಲ್ಲಿ ಅಲ್ಪವೆನ್ನುವುದೇ ಇರುವುದಿಲ್ಲ. ತೈತ್ತಿರೀಯ ಉಪನಿಷತ್ತಿನ ಮಾತಿನಂತೆ ಹೇಳುವುದಾದರೆ ಎಲ್ಲವೂ ಭೂಮಮಯವಾಗಿ ಕಾಣುತ್ತದೆ. ಹಾಗಾಗಿ ಭೂಮಚಿಂತನೆ ನಿರಾಕರಣೆಯಲ್ಲ, ಅದು ಎಲ್ಲವನ್ನೂ ಒಳಗೊಳ್ಳುವ ಮನೋಧರ್ಮ.

ನಗರಸಂಸ್ಕೃತಿ ಮತ್ತು ಪ್ರಕೃತಿ

ನಗರಸಂಸ್ಕೃತಿ ಹೆಚ್ಚಾದಂತೆಲ್ಲ ಮನುಷ್ಯ ಮತ್ತು ಪ್ರಕೃತಿಯ ಸಂಬಂಧದಲ್ಲಿ ದೊಡ್ಡದೊಂದು ಬಿರುಕು ಹುಟ್ಟುತ್ತಿದೆ. ದಿನಕಳೆದಂತೆ ಈ ಬಿರುಕು ದೊಡ್ಡದಾಗುತ್ತ ಹೋಗುತ್ತಿದೆ. ರುದ್ರರಮಣೀಯವಾದ ಕಾಡುಗಳನ್ನು ಪ್ರಕೃತಿ ಮಾತೆಯ ಮಡಿಲು ಎಂದು ಭಾವಿಸುವುದಕ್ಕಿಂತ ಜನ ಇವುಗಳನ್ನು ಅಪಾಯದ ಸ್ಥಳಗಳಾಗಿ ಗುರುತಿಸುತ್ತಾರೆ. ಮನೆಯ ಹಿತ್ತಲಲ್ಲಿ ಬೆಳೆದ ದೊಡ್ಡ ಬೇವಿನ ಅಥವಾ ಹುಣಸೆಯ ಮರ ದೆವ್ವಗಳ ತಾಣವಾಗಿ ಭಾಸವಾಗತೊಡಗುತ್ತದೆ. ಆದರೆ ಕಾಡಿನ ಮಧ್ಯದಲ್ಲೇ ವಾಸಿಸುವ ಗಿರಿಜನರಿಗೆ ಕಾಡು ರಕ್ಷಣೆ ನೀಡುವ ದೇವರ ತಾಣವಾಗಿ ಕಾಣುತ್ತದೆ. ಅವರು ಮರಗಳಲ್ಲಿ ದೇವರನ್ನು ಕಾಣುತ್ತಾರೆಯೇ ಹೊರತು ದೆವ್ವಗಳನ್ನು ಕಾಣುವುದಿಲ್ಲ. ನಗರದ ಜನಗಳಿಗೆ ವನದೇವತೆ ಎಂಬುದು ಜಾನಪದ ಕಥಾಭಾಗವೇ ಹೊರತು ದಿನನಿತ್ಯದ ಬದುಕಿನ ಭಾಗವಲ್ಲ. ಹೀಗೆ ಪ್ರಕೃತಿ–ಮನುಷ್ಯರ ನಡುವಿನ ಬಿರುಕು ನಿರಂತರವಾಗಿ ವಿಸ್ತರಿಸುತ್ತಾ ಕೊನೆಗೆ ಕಾಡುಗಳನ್ನು ಗೆಲ್ಲುವುದೇ ಮನುಷ್ಯ ಜೀವನದ ಪರಮಗುರಿ ಎನ್ನುವ ನಿಲುವಿಗೆ ಮನುಷ್ಯ ಬರುತ್ತಾನೆ. ಅದ್ಭುತವಾದ ಮಳೆಯ ಕಾಡುಗಳನ್ನುಳ್ಳ ಬ್ರೆಜಿಲ್ ದೇಶದ ಅಧ್ಯಕ್ಷನ ಮಾತನ್ನೇ ಗಮನಿಸಿ. ಆತ ಹೇಳುತ್ತಾನೆ: 'ಅಮೇಜಾನ್ ಕಾಡುಗಳನ್ನು ಮಣಿಸುವ, ನದಿಯ ನೀರನ್ನು ಪಳಗಿಸುವ, ಈ ಭೂಮಿಯನ್ನು ಗೆಲ್ಲುವ ನಮ್ಮ ಯುವಜನರ

ಸಾಹಸಮಯ ಬದುಕಿನ ಕನಸು ನನಸಾಗುವ ಪ್ರಯತ್ನ ಸಫಲವಾಗಿದೆ; ಶತಮಾನಗಳ ಈ ಕದನದಲ್ಲಿ ನಾವು ಗೆಲುವುಗಳ ಮೇಲೆ ಗೆಲುವುಗಳನ್ನು ಸಾಧಿಸಿದ್ದೇವೆ', ಕಾಡುಗಳನ್ನು ಕಡಿದು ಕಡಿದು ತೆರವುಗೊಳಿಸಿದ ಈ ಅಧ್ಯಕ್ಷ ಮಹಾಶಯನಿಗೆ ಪ್ರಕೃತಿಯನ್ನು ಪಳಗಿಸುವ, ಗೆಲ್ಲುವ ಗೀಳು ಹಿಡಿದಿದೆ. ಇದನ್ನು ಇವನು ರಾಷ್ಟ್ರೀಯ ಸಾಹಸಗಾಥೆ ಎಂಬುದಾಗಿ ಬಣ್ಣಿಸುತ್ತಿದ್ದಾನೆ. ಗಿರಿಜನ ಮನಸ್ಸಿಗೂ ನಗರಸಂಸ್ಕೃತಿ ರೂಪಿಸುವ ಈ ಪ್ರಕೃತಿ ವಿಧ್ವಂಸಕ ಮನಸ್ಸಿಗೂ ಎಂತಹ ವ್ಯತ್ಯಾಸ! ಪ್ರಕೃತಿಯೊಡನೆ ನಮ್ಮನ್ನು ಒಂದಾಗಿಸುವ ಭಾವನಾಸರಣಿಗಳು ನಮ್ಮ ಮನಸ್ಸಿನ ಆರೋಗ್ಯವನ್ನು ಕಾಪಾಡುತ್ತಾ ಭೂಮಚಿಂತನೆಗೆ ಎಡೆಮಾಡಿಕೊಡುತ್ತವೆ. ಆದರೆ ಯಾವಾಗ ಪ್ರಕೃತಿಯೊಂದಿಗಿನ - ನಮ್ಮ ಸಂಬಂಧ ವಿಕೃತ ರೂಪ ತಾಳುತ್ತದೆಯೋ ಆಗ ಮನಸ್ಸುಗಳು ಕೂಡ ವಿಕೃತವಾಗುತ್ತ ಹೋಗುತ್ತದೆ. ಈ ಸಂದರ್ಭದಲ್ಲಿ ಸ್ವೀಡನ್ ದೇಶದಲ್ಲಿ ನಡೆಸಲಾದ ಒಂದು ಸಂಶೋಧನೆ ನೆನಪಿಗೆ ಬರುತ್ತದೆ. ಅಲ್ಲಿಯ ಆಸ್ಪತ್ರೆಯ ಮುಂಭಾಗದ ವಾರ್ಡ್‌ಗಳು ರಸ್ತೆಗಳಿಗೆ, ಕಟ್ಟಡಗಳಿಗೆ ಎದುರಾಗಿದ್ದವು. ಹಿಂಭಾಗದ ವಾರ್ಡ್‌ಗಳು ದಟ್ಟವಾದ ಕಾಡಿನಂತೆ ಬೆಳೆದಿದ್ದ ಮರಗಳ ಗುಂಪಿನೆಡೆಗೆ ಮುಖಮಾಡಿತ್ತು. ಆಸ್ಪತ್ರೆಯ ಅಂಕಿಅಂಶಗಳ ಪ್ರಕಾರ ಮರಗಳ ಗುಂಪಿಗೆ ಮುಖಮಾಡಿದ್ದ ವಾರ್ಡ್‌ಗಳಲ್ಲಿ ದಾಖಲಾದ ರೋಗಿಗಳು ರಸ್ತೆಗೆ ಮುಖಮಾಡಿದ್ದ ವಾರ್ಡ್‌ಗಳ ರೋಗಿಗಳಿಗಿಂತ ಬೇಗ ಗುಣಮುಖರಾಗುತ್ತಿದ್ದರು. ಪ್ರಕೃತಿಯನ್ನು ಆಸ್ವಾದಿಸುವ ನಮ್ಮ ಮೂಲಗುಣವನ್ನು ನಾವು ಜೀವಂತವಾಗಿಟ್ಟುಕೊಂಡರೆ ನಮ್ಮ ದೈಹಿಕ-ಮಾನಸಿಕ ಆರೋಗ್ಯ ವೃದ್ಧಿಸುತ್ತದೆ. ಆರೋಗ್ಯವಾದ ಮನಸ್ಸುಳ್ಳವರಿಗೆ ದುರಾಸೆಗಳ ಕುರಿತು ಚಿಂತಿಸಲೂ ಬಿಡುವಿರುವುದಿಲ್ಲ! ಆರೋಗ್ಯವಾದ ಮನಸ್ಸಿಗೆ ಭೂಮಚಿಂತನೆ ಸಾಧ್ಯ. ವಿಕೃತ ಮನಸ್ಸಿಗೆ ಸಾಧ್ಯವಾಗುವುದೆಲ್ಲಾ ಅಲ್ಪಚಿಂತನೆ ಮಾತ್ರ.

ಬಹುಶಃ ಪ್ರಾಣಿಗಳಂತೆ ಮನುಷ್ಯನೂ ಸ್ವಾಭಾವಿಕವಾಗಿ ಬದುಕಿದ್ದರೆ ಪ್ರಕೃತಿಯ ಬಗ್ಗೆ ಮನುಷ್ಯ ಉದ್ದೇಶಪೂರ್ವಕವಾಗಿ ವಿನಯ ನಮ್ರತೆಗಳನ್ನು ತಾಳಬೇಕಾಗಿರಲಿಲ್ಲ. ಪ್ರಾಣಿಗಳಂತೆ ಅವನೂ ಸಹ ಸಹಜ ಪರಿಮಿತಗಳಲ್ಲಿ ಬದುಕಿ ಸಾಯುತ್ತಿದ್ದ. ಆದರೆ ತಂತ್ರಜ್ಞಾನ ಸಾಧ್ಯವಾಗಿರುವುದರಿಂದ ಸೃಷ್ಟಿಯ ಒಂದು ಭಾಗವನ್ನು ಮಾತ್ರ ಅರಿತು ಅದನ್ನು ನಿಯಂತ್ರಿಸುವ ಕೆಲಸಕ್ಕೆ ಕೈಹಾಕುತ್ತಿದ್ದಾನೆ. ಸೃಷ್ಟಿಯನ್ನು ನಮ್ಮ ಮನಸ್ಸು ಎಷ್ಟು ಅರಿಯುಬಹುದಿತ್ತೋ ಅಷ್ಟನ್ನೂ ಪ್ರಾಮಾಣಿಕವಾಗಿ ಅರಿತರೆ ಬಹುಶಃ ಮನಸ್ಸು ಯಾವುದನ್ನೂ ನಿಯಂತ್ರಿಸಲು ಪ್ರಯತ್ನಪಡುತ್ತಲೇ ಇರಲಿಲ್ಲ. ಯಾವ ಭ್ರಮೆಗಳೂ ಇಲ್ಲದ ಅವನಿಗೆ ಸಹಜ ಬದುಕೇ ಬೇಕಾದಷ್ಟು ಮುದನೀಡುತ್ತಿತ್ತು. ಅಲ್ಪ ಅರಿವಿನ ಮನಸ್ಸಿಗೆ ಬದುಕಿನ ಅಸಹಜ ಆಯಾಮಗಳ ಕನಸು ಒಂದು ಬಗೆಯ 'ಕಿಕ್' ಕೊಡುತ್ತದೆ. ಈ ಕಿಕ್‌ಅನ್ನು ಅವನು ಅನೇಕ ಬಗೆಯ ಜೀವವಿರೋಧಿ ಸಾಹಸಗಳಲ್ಲಿ ಹುಡುಕುತ್ತಾ ಹೋಗುತ್ತಾನೆ. ಆಲ್ಕೋಹಾಲ್‌ನಿಂದ ಹಿಡಿದು ಹಿಂಸಾಪ್ರಧಾನವಾದ ಎಲ್ಲ ಕ್ರಿಯೆಗಳಿಂದಲೂ ಪಡೆಯುತ್ತಾನೆ. ಹಿಂಸಾಮೂಲದ ಕ್ರಿಯೆಗಳಲ್ಲಿ ತಾನು ಮಾತ್ರ ಗೆಲ್ಲುವ ಇತರರು

ಸೋಲುವ ಸಮೀಕರಣ ಹುಟ್ಟುತ್ತದೆ. ಹೀಗಾಗಿ ಹಿಂಸಾಮೂಲದ ಮನೋರಂಜನೆಯ ಗೀಳು ಸಿನಿಮಾ ನಾಟಕಗಳ ಮನೋರಂಜನೆಗಳಿಂದ ಹಿಡಿದು ನಿಜವಾದ ಅಂತಾರಾಷ್ಟ್ರೀಯ ಯುದ್ದಗಳಾಗಿ ಪರ್ಯವಸಾನವಾಗುತ್ತವೆ. ಎರಡು ದೇಶಗಳ ನಡುವೆ ಯುದ್ಧ, ಮಾಧ್ಯಮದ ತಾಂತ್ರಿಕ ಸಾಧ್ಯತೆಯಿಂದಾಗಿ ಸುರಕ್ಷಿತವಾಗಿ ನೆಲೆಸಿರುವ ಮೂರನೇ ದೇಶದ ಜನರಿಗೆ ಅದ್ಭುತ ಮನೋರಂಜನೆಯಾಗುತ್ತದೆ. ಇಲ್ಲಿ ನೊಂದು ಬೆಂದವರ ಬಗ್ಗೆ ಸಹಾನುಭೂತಿಯ ಆಟಗಳು, ನೊಂದವರಿಗೆ ಆರ್ಥಿಕ ಸಹಾಯಹಸ್ತ ಚಾಚುವ ನಾಟಕಗಳು ನಡೆಯುತ್ತವೆ. ಇದು ಇಡೀ ಮನುಕುಲಕ್ಕೆ ಸಂಬಂಧಪಟ್ಟ ಸಮಸ್ಯೆ ಎಂಬ ಅರಿವು ಒಂದು ದೇಶದ ಜನರಿಗೆ ಮೂಡಿದೊಡನೆ ಅವರು ಮಾಡುವ ಮೊದಲ ಕೆಲಸ ಎಂದರೆ ತಮ್ಮ ಹಿಂಸಾಮೂಲದ ಮನೋರಂಜನೆಯ ಆಟವನ್ನು ಮೊದಲು ತಿರಸ್ಕರಿಸುತ್ತಾರೆ. ತಮ್ಮ ಜೀವನಶೈಲಿಯನ್ನು ಬದಲಿಸಿಕೊಳ್ಳುತ್ತಾರೆ. ನಾನು ಬದುಕುವ ಪರಿ ಇತರರ ಜೀವನಕ್ಕೆ ಮಾರಕವಾಗದ ಹಾಗೆ ಇರಬೇಕೆಂದು ಭಾವಿಸಿ ತಮ್ಮನ್ನೇ ತಾವು ಬದಲಿಸಿಕೊಳ್ಳುತ್ತಾರೆ. ಆದರೆ ಸಮಸ್ಯೆ ಬೇರೊಬ್ಬರಿಗೆ ಸೇರಿದೆ ಎಂದಾದರೆ ಅಥವಾ ಬೇರೊಬ್ಬರಿಗೆ ಸೀಮಿತವಾಗುವಂತೆ ಚದುರಂಗದಾಟ ಆಡಬಹುದು ಎಂದಾದರೆ ಈ ಜನ ಬದಲಾಗುವುದು ಅನಿವಾರ್ಯವಲ್ಲ. ಇಲ್ಲಿ ಪ್ರಶ್ನೆ ಏನೆಂದರೆ ಅಲ್ಪಮನಸ್ಸು ಅಲ್ಪ ಮನೋರಂಜನೆಯಲ್ಲಿ ಮಗ್ನವಾಗುತ್ತದೆ. ಭೂಮಚಿಂತನೆ ಸಾಧ್ಯವಾಗುವ ಮನಸ್ಸು ಸ್ವಲ್ಪವಾದರೂ ಬದಲಾಗಲು ಪ್ರಯತ್ನಿಸುತ್ತದೆ. ಭೂಮಚಿಂತನೆ ಸಾಧ್ಯವಾಗುವಂತೆ ಮಾಡಬೇಕಾದರೆ ಶಿಕ್ಷಣದಲ್ಲಿರಬೇಕಾದ ಅಂಶಗಳು ಯಾವುವು? ಯಾವ ಶೈಕ್ಷಣಿಕ ಅಂಶಗಳಿಗೆ ನಾವು ಆದ್ಯತೆ ಕೊಟ್ಟರೆ ಭೂಮ ಚಂತನೆ ತಾನೇತಾನಾಗಿ ಮೂಡುತ್ತದೆ? ಈ ಕುರಿತು ಚರ್ಚೆ, ಚಿಂತನೆಗಳಾಗಬೇಕಾಗಿದೆ.

ಭಾವನಾತ್ಮಕ ಪಲ್ಲಟಕ್ಕೆ ವೈಚಾರಿಕತೆಯ ಸಹಾಯ

ಇಂದು ಮನುಕುಲಕ್ಕೆ ಅದ್ಭುತವಾದ ವಿಚಾರಶೀಲತೆ ಸಾಧ್ಯವಾಗಿದೆ. ವೈಚಾರಿಕತೆಯಿಂದ ಸಾಧ್ಯವಾಗುವ ಎಲ್ಲ ಸ್ಪಷ್ಟತೆಗಳನ್ನು ಮನುಕುಲ ಪಡೆದಿದೆ. ಆದರೂ ಯಾರೂ ಬದಲಾಗಿಲ್ಲ. ವಿಚಾರಪ್ರಧಾನವಾದ ಬೌದ್ಧಿಕಚಿಂತನೆ ವ್ಯಕ್ತಿಗಳ ಕ್ರಿಯೆಯಲ್ಲಿ ತತ್ಸಮಾನವಾದ ಬದಲಾವಣೆ ತರುತ್ತದೆ ಎಂದು ಭಾವಿಸಲಾಗದು. ಇದು ಅಂತರಂಗದ ಬದಲಾವಣೆಗೆ ಅಗತ್ಯವಾದ ಸಲಕರಣೆಯಾಗಬಹುದು ಅಷ್ಟೆ ಹೇಗೆ ವ್ಯವಸಾಯ ಮಾಡಲು ಸಲಕರಣೆಗಳು ಅಗತ್ಯವೊ ಹಾಗೆ ಆಂತರ್ಯದ ಬದಲಾವಣೆಗೆ ಬೌದ್ಧಿಕ ಸಲಕರಣೆ ಉಪಯೋಗಕ್ಕೆ ಬರಬಹುದು. ಹಾಗೆ ನೋಡಿದರೆ ಕೇವಲ ವಿಚಾರ ಮಾಡಿ ಮನುಷ್ಯ ಆಮೂಲಾಗ್ರವಾಗಿ ಬದಲಾಗಲಾರ ಎಂಬ ಸತ್ಯ ನಮಗೆ ತಿಳಿದುಹೋಗಿದೆ. ಮನುಷ್ಯ ಬದಲಾಗುವುದಾದರೆ ಅದು ಅವನಲ್ಲಿ ಉಂಟಾಗುವ ಭಾವನಾತ್ಮಕ ಪಲ್ಲಟದಿಂದ ಮಾತ್ರ. ಆದರೆ ವಿಚಾರಪ್ರಧಾನವಾದ ನಮ್ಮ ಶಿಕ್ಷಣ ಈ ಭಾವನಾತ್ಮಕ ಬದಲಾವಣೆಗಳ ಕುರಿತು ಮಾತನಾಡುವುದಿಲ್ಲ. ಏಕೆಂದರೆ

ಮನುಷ್ಯನ ಭಾವನಾತ್ಮಕ ಸ್ತರ ಶತಮಾನಗಳ ಅವೈಜ್ಞಾನಿಕ ಚಿಂತನೆಗಳ ಫಲವಾಗಿ ಕಂದಾಚಾರವಾಗಿ ಮೂಢನಂಬಿಕೆಯಾಗಿ ಕೆಟ್ಟ ಹೆಸರು ಪಡೆದಿದೆ. ಭಾವನಾತ್ಮಕತೆ ಎಂಬುದು ಕೇವಲ ಈ ನೇತ್ಯಾತ್ಮಕ ಅಂಶಗಳಿಗೆ ಸೇರಿದ್ದು ಎಂಬ ಹಣೆಪಟ್ಟಿ ಅದಕ್ಕೆ ಇರುವುದರಿಂದ ಅದನ್ನು ವಿಚಾರವಂತರು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಆದರೆ ಮನಸ್ಸು ಮೂಲಭೂತವಾಗಿ ಬದಲಾಗುವ ಸಾಧ್ಯತೆ ಇದ್ದರೆ ಅದು ಈ ಭಾವನಾತ್ಮಕ ಪಲ್ಲಟಗಳಿಂದ ಮಾತ್ರ ಸಾಧ್ಯ. ಈ ಸಾಧ್ಯತೆಯನ್ನು ನಮ್ಮ ಶಿಕ್ಷಣ ಆದಷ್ಟು ವೈಜ್ಞಾನಿಕವಾಗಿ ಅರಿತು ಬೈಬಲ್‌ನ 'ಗುಡ್ ಸಮರಿಟನ್' ಭಾವನೆಗಳು ಮಕ್ಕಳಿಗೆ ಬರುವಂತೆ ಹೊಸ ವಿಧಾನಗಳನ್ನು ಕಂಡುಹಿಡಿಯಬೇಕು. ಮುಖ್ಯವಾಗಿ ಭಾವನಾತ್ಮಕ ಪಲ್ಲಟಗಳಿಗೆ ಬೌದ್ಧಿಕ ಚಿಂತನೆಯನ್ನು ಆಧಾರವಾಗಿ ಜೋಡಿಸುವುದು ಹೇಗೆ ಎಂದು ಸಂಶೊಧನೆಗಳು ನಡೆಯಬೇಕು.

ಭೂಮಚಿಂತನೆ ಭಾವನಾತ್ಮಕ ಪಲ್ಲಟಗಳಿಗೆ ಎಡೆಮಾಡಿಕೊಡುತ್ತದೆ. ಈ ಭೂಮದ ಮೂಲಕ ವಿನೀತಭಾವವನ್ನು ನಾವು ಪಡೆಯಬೇಕು. ಹಿರಣ್ಯಕಶಿಪು-ಮಹಿಷಾಸುರರು ಬ್ರಹ್ಮನ ವರದಿಂದ ಕೊಬ್ಬಿಹೋಗದಿದ್ದರೆ ಅವರಿಗೆ ಭೂಮವನ್ನು ಅಂಗೀಕರಿಸಬೇಕಾದ ಅನಿವಾರ್ಯವೂ ಇರುತ್ತಿರಲಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ತಂತ್ರಜ್ಞಾನ ಪ್ರಗತಿ ಸಾಧಿಸುವುದರ ಜೊತೆಗೆ ಶರಣಧರ್ಮವನ್ನು, ಭೂಮ ಕುರಿತಾದ ಚಿಂತನೆಯನ್ನು ಮನುಕುಲ ಉಳಿಸಿಕೊಳ್ಳಬೇಕಾಗುತ್ತದೆ. ತಂತ್ರಜ್ಞಾನಪ್ರಗತಿಯ ನೇತ್ಯಾತ್ಮಕ ಪರಿಣಾಮಗಳಿಂದ ಮನುಕುಲ ತನ್ನನ್ನೇತಾನು ಕಾಪಾಡಿಕೊಳ್ಳಬೇಕಾದರೆ ಅದು ಭಾವ ಪರಿವರ್ತನೆಯನ್ನು ತರುವ ಭೂಮಚಿಂತನೆಯಿಂದಮಾತ್ರ ಸಾಧ್ಯ. ಸಹಜವಾದ ವಾತಾವರಣದಲ್ಲಿ ಭೂಮಚಿಂತನೆ ಒಂದು ತೃಪ್ತಿಯನ್ನು ಸಾರ್ಥಕತೆಯ ಭಾವನೆಯನ್ನು ತಂದುಕೊಡುತ್ತದೆ. ಆದರೆ ಅಸಹಜ ಮನೋರಂಜನೆಗಳು ವಾತಾವರಣವನ್ನು ಕಲುಷಿತಗೊಳಿಸುವಾಗ ಮನಸ್ಸು ಈ ಕೀಳು ಮನರಂಜನೆಯಲ್ಲೇ ಮೈಮರೆತು ಭೂಮಸಾಧ್ಯತೆಯನ್ನು ಕಲ್ಪಿಸಿಕೊಳ್ಳಲಾರದು. ಜೊತೆಗೆ ಅನ್ನಚಿಂತನೆಯೆ ಪ್ರಧಾನವಾಗಿರುವ ಪರಿಸರದಲ್ಲಿ ಭೂಮಚಿಂತನೆ ಸಾಧ್ಯವಿಲ್ಲ.

ಮಿಥ್ಯಾ ಕಲ್ಪನೆಗಳು ಮತ್ತು ಅಸಮಾನತೆಗಳು

ಇಂದು ಎಲ್ಲ ಬಗೆಯ ಅಸಮಾನತೆಗಳು ತಾಂಡವವಾಡುತ್ತಿರುವುದನ್ನು ನಾವು ಅಧರ್ಮ ಎಂದು ಗುರುತಿಸಬೇಕು. ಆರ್ಥಿಕ ಅಸಮಾನತೆ, ಅವಕಾಶಗಳ ಅಸಮಾನತೆ, ಸಂಪನ್ಮೂಲಗಳ ಮೇಲಿನ ಸ್ವಾಮ್ಯದಲ್ಲಿ ಅಸಮಾನತೆ, ಸಾಕ್ಷರತೆಯಲ್ಲಿ ಅಸಮಾನತೆ, ಜಾತಿಯ ಕಾರಣದಿಂದ ಅಸಮಾನತೆ - ಹೀಗೆ ಈ ಅಸಮಾನತೆಗೆ ಉತ್ತರ ಎಲ್ಲ ಬಗೆಯ ಸಂಪತ್ತಿನ ಸಮಾನ ಹಂಚಿಕೆಯುಲ್ಲ. ಸಂಪತ್ತಿನ ಸಮಾನ ಹಂಚಿಕೆಯಿಂದಾಗಿ ಶ್ರೀಮಂತಿಕೆಯಲ್ಲಿ ಮೆರೆಯುತ್ತಿರುವ ಕೆಲವರನ್ನು ಕೆಳಗೆಳೆಯಬಹುದೇ ಹೊರತು ಇದು

ಸುಸ್ಥಿರ ಸಮಾಜಕ್ಕೆ ನಾಂದಿಯಾಗುವುದಿಲ್ಲ. ಇಡೀ ಮನುಕುಲ ತನ್ನ ಜೀವನಶೈಲಿಯನ್ನು ಬದಲಿಸಿ ಜನಸಂಖ್ಯೆಯನ್ನು ನಿಯಂತ್ರಿಸಿದರೆ ಮಾತ್ರ ಇಂದು ಸುಸ್ಥಿರ ಸಮಾಜ ಸಾಧ್ಯವಾದೀತು. ಆರ್ಥಿಕ ಅಸಮಾನತೆಯ ಬಗ್ಗೆ ನಾವು ಚಿಂತಿಸಿದಾಗ ಹಣ ಎಂಬ ಮಿಥ್ಯೆಯ ಮೇಲೆ ನಿರ್ಮಾಣವಾದ ಈ ಅಸಮಾನತೆಯ ಬಗ್ಗೆ, ಎಂದರೆ ಈ ಮಿಥ್ಯಾ ಕಲ್ಪನೆಗಳ ಬಗ್ಗೆ, ಚಿಂತಿಸುವ ವಿವೇಕವನ್ನು ನಮಗೆ ನಮ್ಮ ಶಿಕ್ಷಣ ಕೊಡಬೇಕು. ಈ ಮಿಥ್ಯೆಯನ್ನು ಅರಿಯುವ ಮೂಲಕ ಮಾತ್ರ ನಾವು ನಿಜವಾದ ಸಮಾನತೆಯನ್ನು ಸಾಧಿಸಬಹುದು. ಹಾಗೆ ನೋಡಿದರೆ ಎಲ್ಲ ಬಗೆಯ ಅಸಮಾನತೆಗಳು ಹುಟ್ಟುವುದು ಒಂದು ಮಿಥ್ಯಾಕಲ್ಪನೆಯಿಂದ. ಈ ಅಸಹಜ ನಂಬಿಕೆಗಳೇ ಪ್ರಕೃತಿಗೆ, ಮನುಕುಲಕ್ಕೆ ಮಾರಕ. 'ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲಷ್ಟು ಸಂಪತ್ತು ಈ ಭೂಮಿಯಲ್ಲಿದೆ; ಆದರೆ ದುರಾಸೆಗಳನ್ನಲ್ಲ' ಎಂದು ಗಾಂಧೀಜಿ ಹೇಳಿದ್ದು ಈ ಸಂದರ್ಭದಲ್ಲಿ ಹೆಚ್ಚು ಅರ್ಥಕೊಡುತ್ತದೆ. ಅಲ್ಪತೆಗೆ ಸೀಮಿತವಾದ ಜೀವನಶೈಲಿ ದುರಂತಮಯ ಸನ್ನಿವೇಶದ ಸೃಷ್ಟಿಗೆ ಕಾರಣವಾಗುತ್ತದೆ.

ಕಾಯಕ ತತ್ತ್ವ ಮತ್ತು ಸಮಾನತೆ

ಶ್ರಮಕ್ಕೆ ಸಮನಾದ ಒಂದು ಗುಣಮಟ್ಟ ಅದರಿಂದ ಉತ್ಪತ್ತಿಯಾದ ವಸ್ತುವಿಗೆ ಇದ್ದೇ ಇರುತ್ತದೆ. ಈ ವಸ್ತುವಿಗೆ ಸಿಗುವ ಪ್ರತಿಫಲ ಮನುಷ್ಯನ ಶ್ರಮಕ್ಕೆ ಸಮನಾಗಿರಬೇಕು. ಶ್ರಮಕ್ಕೆ ಮೀರಿದ ಪ್ರತಿಫಲವನ್ನು ಯಾವುದೋ ಕಪಟ ಭಾವನೆ ಮೂಡಿಸಿ ನಾವು ಪಡೆದರೆ ಆರ್ಥಿಕ ವ್ಯವಸ್ಥೆ ಏರುಪೇರಾಗುತ್ತದೆ. ಇಂದಿನ ಜಾಗತೀಕರಣದ ಮುಖ್ಯ ಸಮಸ್ಯೆ ಇದೇ. ವಸ್ತುವಿಗೆ ಅದರ ಹಿಂದೆ ಇರುವ ಮನುಷ್ಯನ ಶ್ರಮಕ್ಕಿಂತ ಹೆಚ್ಚಿನ ಬೆಲೆಯನ್ನು ನಾವು ನೀಡಿ ಇಡೀ ವ್ಯವಸ್ಥೆಯನ್ನು ಕೆಡಿಸುತ್ತಿದ್ದೇವೆ. ಚಿನ್ನ ಹೀಗೆ ಬೆಲೆಯುಳ್ಳದ್ದು. ಚಿನ್ನಕ್ಕೆ ನಾವು ಹೆಚ್ಚು ಬೆಲೆ ಕಟ್ಟಿದ್ದೇವೆ. ಅದರ ಹಿಂದೆ ಮನುಷ್ಯನ ಶ್ರಮದ ಪ್ರಶ್ನೆ ಇಲ್ಲ; ಬದಲಿಗೆ ಅದೃಷ್ಟದ ಪ್ರಶ್ನೆ ಇದೆ. ಹಾಗಾಗಿ ಅದು ಕೆಲವೇ ಅದೃಷ್ಟವಂತರಿಗೆ ಸೀಮಿತವಾದ ವಿಷಯ. ಸಮಾಜದಲ್ಲಿ ನಾವೆಲ್ಲರೂ ಪಡೆಯುವ ಪ್ರತಿಫಲದ ಹಿಂದೆ ಶ್ರಮ ಇರಬೇಕೆಂಬುದೇ ಕಾಯಕತತ್ತ್ವ. ಒಬ್ಬ ರೈತ ವರ್ಷವಿಡೀ ಉತ್ತು ಬಿತ್ತು ನೂರು ಮೂಟೆ ರಾಗಿ ಬೆಳೆದು ಮಾರಿ ಬಂದ ದುಡ್ಡಿನಲ್ಲಿ ಮಗಳ ಮದುವೆಗೆಂದು ಚಿನ್ನವನ್ನು ಕೊಂಡ. ಚಿನ್ನದ ವ್ಯಾಪಾರಿ ಈ ಚಿನ್ನವನ್ನು ಸಂಪಾದಿಸಲು ಪಟ್ಟ ಶ್ರಮ ಯಾವುದು? ರೈತನ ರಾಗಿಯನ್ನು ತಿನ್ನಬಹುದು–ಬದುಕಬಹುದು. ಚಿನ್ನವನ್ನು ಧರಿಸಬಹುದೇ ಹೊರತು ಅದನ್ನೇ ತಿಂದು ಬದುಕಲು ಸಾಧ್ಯವೆ? ಈ ವ್ಯಾಪಾರದಲ್ಲಿ ಶ್ರಮದ ಬೆಲೆಗೆ ಸಿಗುವ ಪ್ರತಿಫಲದ ಅಸಮತೋಲನವನ್ನು ಗಮನಿಸಿ. ರೈತನ ಶ್ರಮಕ್ಕೆ ಚಿನ್ನದ ಹಿಂದಿರುವ ವ್ಯಾಪಾರಿಯ ಶ್ರಮ ಸಮವೆ? ಜೊತೆಗೆ ಚಿನ್ನದ ವ್ಯಾಪಾರಿಯ ದರ್ಪ, ರೈತನ ದೈನ್ಯತೆಗಳು ಶ್ರಮಕ್ಕೆ ಸಿಗಬಹುದಾದ ಮರ್ಯಾದೆಯನ್ನು

ಸೂಚಿಸುತ್ತವೆಯಲ್ಲವೆ? ರೈತನಿಗೆ ನಿಜವಾಗಿಯೂ ತನ್ನ ದುಡಿಮೆಯ ಬಗ್ಗೆ ಹೆಮ್ಮೆ ಇರಬೇಕಾಗಿತ್ತು. ಚಿನ್ನದ ವ್ಯಾಪಾರಿಗೆ ಅಪರಾಧಿ ಪ್ರಜ್ಞೆ ಬರಬೇಕಾಗಿತ್ತು. ಈ ಎರಡನ್ನೂ ತಿರುಗು ಮುರುಗು ಮಾಡಿದ ಭ್ರಮೆ ಯಾವುದು? ಈ ದೌರ್ಬಲ್ಯವೇ ಮನುಕುಲದ ಎಲ್ಲಾ ಅಸಮಾನತೆಗಳ ಮೂಲ. ಜಾಗತೀಕರಣದ ಯಶಸ್ಸಿಗೆ ಈ ಭ್ರಮೆಯೇ ಬಂಡವಾಳ. ಪ್ರಕೃತಿ ಇದನ್ನು ತತ್ಕಾಲಕ್ಕೆ ಭರಿಸಿದರೂ ಹೆಚ್ಚು ಸಮಯ ಇದನ್ನು ಪೋಷಿಸಲಾರದು.

ಈ ಚರ್ಚೆಯ ಹಿನ್ನಲೆಯಲ್ಲಿ ನಾವು ಬಯಸುವ ವಿವೇಕ ಶಿಕ್ಷಣದ ವ್ಯಾಪ್ತಿಗೆ ಬರಲಾರದೇನೋ ಎಂದು ಮೇಲ್ನೋಟಕ್ಕೆ ಅನಿಸುತ್ತದೆ. ಇದಕ್ಕೆ ಇರಬಹುದಾದ ಒಂದೇ ಒಂದು ಕಾರಣ ಎಂದರೆ ನಮ್ಮ ಇಂದಿನ ಪರಿಸರ ಈ ವಿವೇಕದ ವಿರುದ್ಧ ಸೆಟೆದು ನಿಂತಿದೆ. ವಿವೇಕ ನಮ್ಮ ಬಹಳಷ್ಟು ಪೋಷಕರ ನಿರೀಕ್ಷೆಯಾಗಿಲ್ಲ. ಸಮಾಜದ ಸರಾಸರಿ ಬೇಡಿಕೆಗೆ ಪೂರಕವಾದ ಶಿಕ್ಷಣವನ್ನು ನಮ್ಮ ಶಿಕ್ಷಣ ಮಾರುಕಟ್ಟೆ ಮಕ್ಕಳಿಗೆ ಒದಗಿಸುತ್ತಿದೆ. ಪಡೆಯುವವರು-ಕೊಡುವವರು ಒಂದಾದ ಮೇಲೆ ಈ ನಡುವೆ ಯಾರಿಗೂ ಬೇಡದ ವಿವೇಕವನ್ನು ಶಿಕ್ಷಣದ ಭಾಗವಾಗಿ ತರುವುದಾದರೂ ಹೇಗೆ? ಪ್ರಶ್ನೆ ಏನೆಂದರೆ ಕೆಟ್ಟ ಮೇಲೆ ಬುದ್ಧಿ ಬಂದು ಆಗ ವಿವೇಕಕ್ಕೆ ಬೇಡಿಕೆ ಬಂದಾಗ ನಾವು ಕಾರ್ಯ ಪ್ರವೃತ್ತರಾಗಬೇಕೋ ಅಥವಾ ಈಗಲೇ ಇಂತಹ ವಿವೇಕವನ್ನು ಪ್ರಯತ್ನಪೂರ್ವಕವಾಗಿ ಅಳವಡಿಸಲು ನೋಡಬೇಕೋ? ಒಂದು ವೇಳೆ ನಮ್ಮ ಪರಿಸರ, ಸಮಾಜ ಸರಿಪಡಿಸಲಾಗದಷ್ಟು ಕೆಟ್ಟುಹೋದರೆ ಆಗ ವಿವೇಕವಂತರಾಗುವುದರಿಂದ ಏನು ಪ್ರಯೋಜನ? ಅಲ್ಲದೆ ಡೆಮಾಕ್ರಸಿಯಲ್ಲಿ ನನಗೆ ತಿಳಿದಿರುವುದೇ ವಿವೇಕ ಎಂದು ಸಾಧಿಸುವುದಾದರೂ ಹೇಗೆ?

ಈ ಕಾರಣಗಳಿಂದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಶಿಕ್ಷಣದ ಪಾತ್ರ ದೊಡ್ಡದಾಗುತ್ತ ಹೋಗುತ್ತದೆ. ಶಿಕ್ಷಣ ಮಾಡಬಹುದಾದ ಒಂದೇ ಕೆಲಸವೆಂದರೆ ಅದು ಎಲ್ಲ ಬಗೆಯ ಮಿಥ್ಯಾಕಲ್ಪನೆಗಳ ಅಸಹಜತೆಯನ್ನು ವಿಚಾರಗಳ ಆಧಾರದ ಮೇಲೆ ಬಯಲು ಮಾಡುವುದು. ಅಂಕಿಅಂಶಗಳ ಸಹಿತ ಆಧಾರಗಳ ಸಹಿತ ಪರಿಸರ ಕುರಿತಾದ ಅಥವಾ ಆರ್ಥಿಕ ಅಸಮಾನತೆಯ ಕುರಿತಾದ ಪರಿಣಾಮಗಳನ್ನು ಮಕ್ಕಳ ಹಂತದಿಂದಲೇ ಮನವರಿಕೆ ಮಾಡಿಕೊಡುವುದು. ಜನಸಂಖ್ಯೆ, ಪರಿಸರನಾಶದ ಕುರಿತು ಈಗಾಗಲೇ ನಮ್ಮ ಕೈಯಲ್ಲಿರುವ ಅಂಕಿಅಂಶಗಳ ಕುರಿತು ಮಕ್ಕಳ ನಡುವೆ ಚರ್ಚೆ ನಡೆಯಬೇಕು. ಅವರೂ ಈ ವಿಷಯಗಳಲ್ಲಿ ಸ್ವತಂತ್ರ ಅಭಿಪ್ರಾಯಗಳನ್ನು ತಳೆಯುವಂತಾಗಬೇಕು. ಮುಂದಿನ ಜೀವನದ ಎಡರು ತೊಡರುಗಳನ್ನು ಮುಂದಿನ ಪೀಳಿಗೆಯೇ ಎದುರಿಸಬೇಕಗಿರುವುದರಿಂದ ಇದಕ್ಕೆ ಅಗತ್ಯವಾದ ಜವಾಬ್ದಾರಿಯನ್ನು ಅವರೇ ಕಂಡುಕೊಳ್ಳುವಂತಹ ಶಿಕ್ಷಣ ಅವರಿಗೆ ದೊರೆಯಬೇಕು. ತಂತ್ರಜ್ಞಾನ ಪ್ರಧಾನವಾದ, ತಂತ್ರಜೀವನದ ಮಿಥ್ಯೆ ಬಯಲಾಗುವ ಶಿಕ್ಷಣ ನಮ್ಮ ಮಕ್ಕಳಿಗೆ ಬೇಕು.

ಸಮದರ್ಶನವೇ ಪಾಂಡಿತ್ಯ

ನಿಜವಾದ ಭೂಮಕಲ್ಪನೆ ಯಾವಾಗಲೂ ಸಮದರ್ಶನಕ್ಕೆ ಸಂಬಂಧಪಟ್ಟಿರುತ್ತದೆ. ಪಂಚೀಕರಣ ಗ್ರಂಥ ಹೇಳುತ್ತದೆ– "ಸಮದರ್ಶನವೇ ಪಾಂಡಿತ್ಯ" ಎಂದು. ಬಸವಣ್ಣನವರ ಇಡೀ ಜೀವನಸಂದೇಶವೇ ಈ ಸಮದರ್ಶನ. ಹಾಗಾಗಿ ಅವರು ಉಳಿದೆಲ್ಲ ವಚನಕಾರರಿಗಿಂತಲೂ ವಿಶಿಷ್ಟವಾಗಿ ಎಲ್ಲ ಕಾಲದಲ್ಲೂ ಎಲ್ಲರಿಗೂ ಸಲ್ಲುವಂತೆ ಕಂಡುಬರುತ್ತಾರೆ. ಮನಸ್ಸು ಪಕ್ವವಾಗಿರುವ ಕುರುಹು ಸಮದರ್ಶನ. ಅದು ಈ ಸ್ಥಿತಿಯನ್ನು ಸಾಧಿಸಿದೆ ಎಂದಾದರೆ ಅದರ ದೃಷ್ಟಿಯಲ್ಲಿ ಪಂಡಿತ–ಪಾಮರ, ರಾಜ–ಶ್ರೀಸಾಮಾನ್ಯ ಎಲ್ಲರೂ ಒಂದೇ ಆಗಿ ಕಾಣುತ್ತಾರೆ. ಇದು ನಿಜವಾದ ಭೂಮಚಿಂತನೆ; ಮನಸ್ಸು ಪಕ್ವವಾಗುವ ಬಗೆ. ಆದರೆ ಹಣವನ್ನಷ್ಟೇ ಕೇಂದ್ರವಾಗಿಟ್ಟುಕೊಂಡಾಗ ಹುಟ್ಟುವ ಹಿರಿತನ ತನ್ನದೇ ಸಿದ್ಧಾಂತಗಳ ಆಧಾರಗಳ ಮೇಲೆ ತಾರತಮ್ಯವನ್ನು ಬಯಸುತ್ತದೆ. ಇದೇ ಪುರೋಹಿತಶಾಹಿ ಮನಸ್ಸು. ಇದು ಪ್ರಪಂಚದಾದ್ಯಂತ ನಡೆಯುತ್ತಿರುವ ವಿದ್ಯಮಾನ. ದುರ್ಬಲರನ್ನು ಅಂಚಿಗೆ ತಳ್ಳುವ ಕ್ರಿಯೆ ಅಮೆರಿಕಾ, ಜಪಾನ್, ಫ್ರಾನ್ಸ್ ನಂತಹ ದೇಶಗಳಲ್ಲೂ ನಡೆಯುತ್ತಿದೆ. ಅಮೆರಿಕಾ ಫ್ರಾನ್ಸ್‌ಗಳಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ವೃದ್ಧರ ಪರಿಸ್ಥಿತಿ ಶೋಚನೀಯವಾಗಿದೆ. ಭಾರತ ಮೂಲದ ಪ್ರಸಿದ್ಧ ವಿಜ್ಞಾನಿಯೊಬ್ಬರು ಅಮೆರಿಕಾದಲ್ಲಿ ನೆಲೆಸಿದ್ದಾರೆ. ಆದರೆ ಇಂದು ಅವರು ಅಮೆರಿಕಾದ ವೃದ್ಧಾಶ್ರಮವೊಂದರಲ್ಲಿ ಆಶ್ರಯ ಪಡೆದಿದ್ದಾರಂತೆ. ಇದಕ್ಕೆ ಕಾರಣ ಏನೇ ಇದ್ದರೂ ಒಂದು ಸಮಾಜ ಹಣವನ್ನಷ್ಟೇ ತನ್ನ ಕೇಂದ್ರವಾಗಿಟ್ಟುಕೊಂಡಾಗ ಮನುಷ್ಯ ಸಂಬಂಧಗಳು ಶಿಥಿಲವಾಗುವ ಬಗೆಯನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಮದರ್ ತೆರೇಸಾ ಲಾಸ್‌ಏಂಜಲೀಸ್‌ಗೆ ಭೇಟಿಕೊಟ್ಟ ಸಂದರ್ಭದಲ್ಲಿ ನಡೆದ ಮಾತುಕತೆ ನೆನಪಿಗೆ ಬರುತ್ತದೆ. ಲಾಸ್ ಏಂಜಲೀಸ್‌ನ ಜನ ಹೇಳುತ್ತಾರೆ "ಮದರ್ ನಮ್ಮದು ಪ್ರಪಂಚದಲ್ಲೇ ಅತ್ಯಂತ ಶ್ರೀಮಂತ ರಾಜ್ಯ. ಇದೇನೂ ಕಲ್ಕತ್ತಾ ಅಲ್ಲ. ಇಲ್ಲಿ ನೀವು ಏನನ್ನು ತಾನೆ ಕೊಡಲು ಸಾಧ್ಯ? " ಆಗ ಮದರ್ ತೆರೇಸಾ ಹೇಳಿದರಂತೆ "ಇಲ್ಲೂ ಕೂಡ ಬಡತನವಿದೆ! ಪ್ರೀತಿಯ ಬಡತನ, ಮನುಷ್ಯ ಸಂಬಂಧಗಳ ಬಡತನ, ಮನುಷ್ಯತ್ವದ ಬಡತನ. ಈ ಬಡತನಗಳು ಹಣದ ಬಡತನಕ್ಕಿಂತ ದೊಡ್ಡ ಬಡತನಗಳಲ್ಲವೇ?" ಬಹುಶಃ ಲಾಸ್ ಏಂಜಲೀಸ್‌ನ ಜನರಿಗೆ ಈ ಮಾತುಗಳನ್ನು ನಿರಾಕರಿಸಲಾಗಲಿಲ್ಲ ಎಂದು ಕಾಣುತ್ತದೆ. ಆರ್ಥಿಕ ಸಾರ್ವಭೌಮತ್ವವು ಪ್ರೀತಿಯ ಅಥವ ಸಂಬಂಧಗಳ ಬಡತನವನ್ನು ಕೇಳದೆಯೇ ದಯಪಾಲಿಸುತ್ತದೆ. ಇಲ್ಲದಿದ್ದರೆ ಶ್ರೇಷ್ಠ ವಿಜ್ಞಾನಿಯೊಬ್ಬ ತನ್ನ ಕೊನೆಯ ದಿನಗಳನ್ನು ವೃದ್ಧಾಶ್ರಮದಲ್ಲಿ ಕಳೆಯಬೇಕೇಕೆ?

ಭೂಮಚಿಂತನೆ ಮನುಷ್ಯ ಸಂಬಂಧಗಳನ್ನು ಕಟ್ಟಿಕೊಡುತ್ತದೆ. ಭೂಮಚಿಂತನೆಗೆ ಒಂದು ವಾತಾವರಣ ಬೇಕು; ಕೆಲವು ಜೀವಂತಮಾದರಿಗಳಾದರೂ ಬೇಕು. ಶಿಕ್ಷಣದ ಮೂಲಕ ಇಂತಹ ಒಂದು ವಾತಾವರಣವನ್ನು ಸೃಷ್ಟಿಸಲಾಗದಿದ್ದರೆ ಕ್ರಮೇಣ ಮನುಕುಲ ದುರಂತಗಳ ಹಾದಿಯಲ್ಲಿ ಮುನ್ನಡೆಯುವುದು ಖಚಿತ.

ಅತಿಯಾದ ಯಾಂತ್ರೀಕರಣ ಮತ್ತು ಕಂಪ್ಯೂಟರ್

ಅತಿಯಾದ ಯಾಂತ್ರೀಕರಣವನ್ನು ವಿರೋಧಿಸುವ ನಾವು ಕಂಪ್ಯೂಟರ್‌ಗಳನ್ನು ಸ್ವಲ್ಪವೂ ಅವಲಂಬಿಸಿಲ್ಲವೇ? ಈ ಪ್ರಶ್ನೆಯನ್ನು ನಾವು ಸರಿಯಾಗಿ ಉತ್ತರಿಸಲೇಬೇಕು. ಇಂದು ಕಂಪ್ಯೂಟರ್‌ಗಳು ಅನಗತ್ಯ ಎಂದು ಹೇಳುವ ಸ್ಥಿತಿಯಲ್ಲಿ ನಾವಿಲ್ಲ. ಜನಸಂಖ್ಯೆ ಹೆಚ್ಚುತ್ತಿರುವ ಈ ಕಾಲದಲ್ಲಿ, ಅಪರಾಧಗಳು ಹದ್ದುಮೀರುತ್ತಿವೆ, ಸಮಾಜಘಾತಕರು ಹೆಚ್ಚುತ್ತಿದ್ದಾರೆ. ಇಂತಹ ಪರಿಸ್ಥಿಯಲ್ಲಿ ಅಪರಾಧಗಳನ್ನು ತಡೆಗಟ್ಟಲು ಕಂಪ್ಯೂಟರ್ ತಂತ್ರಜ್ಞಾನ ಉಪಯುಕ್ತವಾಗಿದೆ. ಜನಸಂಖ್ಯೆ ಕಡಿಮೆಯಿದ್ದ ಸಂದರ್ಭದಲ್ಲಿ ಈ ಸಮಾಜಘಾತಕರು ಸುಲಭವಾಗಿ ಸಿಕ್ಕಿಕೊಳ್ಳಬಹುದೆಂಬ ಹೆದರಿಕೆಯಿಂದಾಗಿ ಕನಿಷ್ಠ ಪ್ರಮಾಣದಲ್ಲಿರುತ್ತಾರೆ. ಯಾವಾಗ ಬೃಹತ್ ಜನಸಾಗರವೇ ಉಂಟಾಗುವುದೋ ಆಗ ಸಮಾಜಘಾತಕರ ಸಂಖ್ಯೆಯೂ ಹೆಚ್ಚಾಗುತ್ತದೆ. ಕಡಿಮೆ ಜನಸಂಖ್ಯೆ ಇದ್ದಾಗ ಶೇಕಡ ಹತ್ತು ಸಮಾಜಘಾತಕರಿದ್ದಾರೆ ಎಂದು ಭಾವಿಸುವುದಾದರೆ ಜನಸಂಖ್ಯೆ ಅಂಕೆ ಮೀರಿ ಬೆಳೆದಾಗ ಶೇಕಡ ಇಪ್ಪತ್ತು ಸಮಾಜಘಾತಕರು ತಯಾರಾಗುತ್ತಾರೆ ಎಂದು ನಾವು ಸುಲಭವಾಗಿ ಊಹಿಸಬಹುದು. ಹಾಗೆಯೇ ಕಡಿಮೆ ಜನಸಂಖ್ಯೆ ಇದ್ದಾಗ ಶೇಕಡ ಹತ್ತು ಆದರ್ಶಪ್ರಾಯ ವ್ಯಕ್ತಿಗಳಿದ್ದಾರೆ ಎನ್ನುವುದಾದರೆ ಜನಸಂಖ್ಯೆ ವಿಪರೀತ ಹೆಚ್ಚಿದಾಗ ಇಂತಹ ಆದರ್ಶಪ್ರಾಯ ವ್ಯಕ್ತಿಗಳ ಸಂಖ್ಯೆ ಶೇಕಡ ಐದಕ್ಕೆ ಇಳಿಯುತ್ತದೆ ಎಂದು ಊಹಿಸಬಹುದು. ಈ ಅನುಭವದಿಂದಾಗಿ ಕಾಲ ಕೆಟ್ಟು ಹೋಯಿತು ಎಂಬಂತಹ ಉದ್ಗಾರಗಳು ಹುಟ್ಟುತ್ತವೆ. ಇದಕ್ಕೆ ಮುಖ್ಯ ಕಾರಣವೆಂದರೆ ಜನಸಂಖ್ಯೆ ಕಡಿಮೆ ಇದ್ದಾಗ ವ್ಯಕ್ತಿಗಳ ಗುರುತನ್ನು ಸಮೂಹ ಮನಸ್ಸು ನೆನಪಿಟ್ಟುಕೊಳ್ಳುತ್ತದೆ. ಹಾಗಾಗಿ ದುಷ್ಟ ಕೆಲಸಗಳನ್ನು ಮಾಡಲು ಎಲ್ಲರೂ ಹೆದರುತ್ತಾರೆ. ಪರಿಣಾಮವಾಗಿ ಸಮಾಜಘಾತಕರ ಸಂಖ್ಯೆ ಮಿತವಾಗಿರುತ್ತದೆ. ದೊಡ್ಡ ಜನಸಾಗರದಲ್ಲಿ ಪರಕೀಯತಾ ಭಾವನೆ (Alienation) ಹುಟ್ಟುತ್ತದೆ. ಜೊತೆಗೆ ದುಷ್ಕರ್ಮಿಯೊಬ್ಬ ತನ್ನ ಗುರುತು ಸಿಗದಂತೆ ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯವಿರುವುದರಿಂದ ದುಷ್ಕೃತ್ಯದಲ್ಲಿ ತೊಡಗುವವರ ಸಂಖ್ಯೆಯೂ ಹೆಚ್ಚಾಗುತ್ತದೆ. ಇಂತಹ ಸಂದರ್ಭದಲ್ಲಿ ಕಂಪ್ಯೂಟರ್‌ನಂತಹ ತಂತ್ರಜ್ಞಾನವನ್ನು ಬಳಸಿ ಪ್ರತಿಯೊಬ್ಬರ ಗುರುತು ಇಟ್ಟುಕೊಳ್ಳುವುದಾದರೆ ದುಷ್ಟಶಕ್ತಿಗಳನ್ನು ದಮನ ಮಾಡಬಹುದು. ಇದು ತಂತ್ರಜ್ಞಾನದಿಂದ ಸಾಧ್ಯವಾಗುವ ಅದ್ಭುತ. ಭ್ರಷ್ಟಾಚಾರ ನಿಯಂತ್ರಣದಲ್ಲಿ ಬಹುಶಃ ಕಂಪ್ಯೂಟರ್ ಸಂಬಂಧಿ ತಾಂತ್ರಿಕತೆಗಳು ಮನುಷ್ಯ ಸುಳ್ಳು ಹೇಳಿ ನುಣುಚಿಕೊಳ್ಳದಂತೆ ತಡೆಯುವಲ್ಲಿ ಯಶಸ್ವಿಯಾಗಿವೆ.

ರೈಲ್ವೆ ರಿಸರ್ವೇಷನ್‌ನಂತಹ ಒಂದು ಕ್ಲಿಷ್ಟ ಪರಿಸ್ಥಿತಿಯನ್ನು ನಿರ್ವಹಿಸಲು ಕಂಪ್ಯೂಟರ್ ಇಲ್ಲದೆ ಸಾಧ್ಯವೇ ಇಲ್ಲ. ಇವು ಕೆಲವು ಉದಾಹರಣೆಗಳಷ್ಟೆ. ಇಂತಹ ಹಲವಾರು ಕಾರಣಗಳಿಗಾಗಿ ನಾವು ಕಂಪ್ಯೂಟರ್‌ಗಳನ್ನು ಸಾರಾಸಗಟಾಗಿ ತಿರಸ್ಕರಿಸಲು ಸಾಧ್ಯವೇ ಇಲ್ಲ. ಆದರೆ ಕಂಪ್ಯೂಟರ್‌ಗಳನ್ನು ಹೀಗೆ ಅವಲಂಬಿಸಿದ್ದೇವೆ ಎಂದ ಮಾತ್ರಕ್ಕೆ ನಾವು

ಇಂದು ಯಾವುದೆಲ್ಲಕ್ಕೂ ಕಂಪ್ಯೂಟರ್‌ಗಳನ್ನು ಬಳಸುತ್ತಿದ್ದೇವೆಯೋ ಅವೆಲ್ಲವೂ ಸಮರ್ಥನೀಯ ಎಂದೂ ಭಾವಿಸಲು ಸಾಧ್ಯವಿಲ್ಲ. ಅಥವಾ ಈ ಬಳಕೆ ವಿವೇಕಯುತವಾದದ್ದು ಎಂದೂ ಭಾವಿಸಲಾಗುವುದಿಲ್ಲ. ಕಂಪ್ಯೂಟರ್‌ಗಳು ಮೊದಲನೆಯದಾಗಿ ಬದುಕಿನ ಸಹಜಶೀಲತೆಯನ್ನು ಮೊಟಕುಗೊಳಿಸುತ್ತವೆ. ಸಹಜವಾಗಿ ಮಾಡಬಹುದಾದದ್ದನ್ನು ಕಂಪ್ಯೂಟರ್ ಇದೆಯಲ್ಲ ಎಂದು ಕಂಪ್ಯೂಟರ್ ಮುಖಾಂತರ ಮಾಡುತ್ತೇವೆ. ಅತಿಥಿಗಳು ಬಂದಾಗ ಯಾವ ಅಡಿಗೆ ಮಾಡಬಹುದು ಎಂದು ಕಂಪ್ಯೂಟರ್‌ನಲ್ಲಿ ಪಟ್ಟಿ ತಯಾರು ಮಾಡಿಟ್ಟುಕೊಳ್ಳುವುದನ್ನು ಇಂದು ಅನೇಕರು ಸಮರ್ಥಿಸಬಹುದು. ಚಿಕ್ಕಪುಟ್ಟ ಕೂಡುವ ಕಳೆಯುವ ಲೆಕ್ಕಗಳಿಗೂ ಕಂಪ್ಯೂಟರ್ ಬಳಕೆ ಮಾಡುವುದು ಒಂದು ಆಧುನಿಕ ಕಾಯಿಲೆ ಎನ್ನಬಹುದೇನೊ?

ಬೀಜ ಮೊಳಕೆಗೂ ಕಂಪ್ಯೂಟರ್!

ಒಮ್ಮೆ ಒಂದು ಶಾಲೆಗೆ ಹೋಗಿದ್ದೆ. ಅಲ್ಲಿಯ ಅಧ್ಯಾಪಕರು ಕಂಪ್ಯೂಟರ್ ಬಳಸುತ್ತಿದ್ದ ರೀತಿಯನ್ನು ನೋಡಿ ನಗು ಬಂತು. ಅವರು ಯಾವುದೋ ಸಾಫ್ಟ್‌ವೇರ್ ಒಂದನ್ನು ಇತ್ತೀಚೆಗೆ ಪಡೆದಿದ್ದರು. ಒಂದು ಬೀಜವನ್ನು ಗಾಜಿನ ಪಾತ್ರೆಯಲ್ಲಿಟ್ಟು ನೀರು ಹಾಕಿದರೆ ಆ ಬೀಜ ಹೇಗೆ ಮೊಳಕೆಯೊಡೆದು ಬೇರು ಮತ್ತು ಕಾಂಡಗಳನ್ನು ಬೆಳೆಸಿಕೊಳ್ಳುತ್ತದೆ ಎಂಬ ಅನಿಮೇಷನ್ ಚಿತ್ರವನ್ನು ಕಂಪ್ಯೂಟರ್ ಮೂಲಕ ತೋರಿಸುತ್ತಿದ್ದರು. ಈ ಚಿತ್ರ ತೋರಿಸುವುದರಿಂದ ಮಗುವಿನ ಕಲಿಕೆ ಹೆಚ್ಚಿಗೆ ಆಗುತ್ತದೆ ಎಂಬುದು ಅವರ ವಾದ. ನಾನು ಅವರನ್ನು ಕೇಳಿದೆ – 'ನೀವು ಬೀಜ ಮೊಳಕೆ ಬರುವುದನ್ನು ಅನಿಮೇಷನ್ ಮೂಲಕ ಏಕೆ ತೋರಿಸುತ್ತಿದ್ದೀರಿ? ಒಂದು ಹುರುಳಿಕಾಯಿಯ ಬೀಜವನ್ನು ತಂದು ನೀರಿನಲ್ಲಿ ನೆನೆಸಿದರೆ ನಿಜವಾಗಿಯೂ ಬೀಜ ಮೊಳಕೆಯೊಡೆಯುವುದನ್ನು ನೋಡಬಹುದಲ್ಲವೇ?' ಆದರೆ ಆ ಸರ್ಕಾರಿ ಶಾಲೆಯ ಅಧ್ಯಾಪಕರು ಇದಕ್ಕೆ ತಮ್ಮದೇ ಸಮರ್ಥನೆ ನೀಡಿದರು. ಅವರ ಪ್ರಕಾರ ಕಂಪ್ಯೂಟರ್ ಕೈಯಲ್ಲಿರುವಾಗ ಬೀಜಕ್ಕೆ ನೀರು ಹಾಕಿ ಕಾಯಬೇಕು ಏಕೆ? ಕಂಪ್ಯೂಟರ್‌ನಲ್ಲಿ ತಕ್ಷಣ ಮೊಳಕೆ ಬರುವುದನ್ನು, ತಕ್ಷಣ ಬೇರು ಕಾಂಡಗಳು ಬೆಳೆಯುವುದನ್ನು ನೋಡಬಹುದಲ್ಲ! ಈ ಅಧ್ಯಾಪಕರಿಗೆ ಸಹಜ ಕ್ರಿಯೆಯನ್ನು ಗಮನಿಸುವುದು ಕೀಳು ಎಂಬ ಭಾವನೆಯಿದ್ದಂತೆ ಕಂಡಿತು. ಅಲ್ಲದೆ ಮಕ್ಕಳು ಹೀಗೆ ಬೀಜ ಮೊಳಕೆ ಬರುವುದನ್ನು ಮನೆಗಳಲ್ಲೂ ನೋಡಿರುತ್ತಾರೆ. ಅದರಲ್ಲಿ ಏನು ತಾನೆ ವಿಶೇಷವಿದೆ ಎನ್ನುವಂತೆ ಮಾತನಾಡಿದರು. ಇಲ್ಲಿ ಪ್ರಶ್ನೆ ಏನೆಂದರೆ ಒಂದು ವೇಳೆ ಅನಿಮೇಷನ್ ಚಿತ್ರ ಇಲ್ಲದಿದ್ದರೆ ಬಹುಶಃ ಈ ಅಧ್ಯಾಪಕರು ನಿಜವಾದ ಬೀಜ ಮೊಳಕೆ ಬರುವುದನ್ನೇ ತೋರಿಸುತ್ತಿದ್ದರೋ ಏನೋ. ಅಥವಾ ಗೋಡೆಯ ಮೇಲೆ ಚಿತ್ರ ಬರೆದು ತೋರಿಸಿಬಿಡುತ್ತಿದ್ದರೋ ಏನೋ. ಕಂಪ್ಯೂಟರ್ ತಂತ್ರಜ್ಞಾನದ ಚಮತ್ಕಾರಗಳು ಈ ಅಧ್ಯಾಪಕರನ್ನು ಬಹಳ ಬೇಗ ಮುಗ್ಧರನ್ನಾಗಿ ಮಾಡಿದ್ದವು.

ಅಲ್ಲದೆ ಸರ್ಕಾರಿ ಶಾಲೆಯೊಂದಕ್ಕೆ ಉಚಿತವಾಗಿ ಒಂದು ಕಂಪ್ಯೂಟರನ್ನು ದೊರಕಿಸಿಕೊಂಡಿರುವಾಗ ಅದನ್ನು ಸಮರ್ಥವಾಗಿ ಬಳಸಿ ಉಳಿಸಿಕೊಳ್ಳಬೇಕಲ್ಲವೆ? ಹಾಗಾಗಿ ಪರಿಣತನೊಬ್ಬ ಸಿದ್ಧಪಡಿಸಿದ 'ಬೀಜ ಮೊಳಕೆ ಅನಿಮೇಷನ್' ಚಿತ್ರವನ್ನು ಈ ಅಧ್ಯಾಪಕರು ಬಳಸುತ್ತಿದ್ದರು.

ಇಲ್ಲಿ ಮತ್ತೊಂದು ಅಂಶವನ್ನು ನಾವು ಗಮನಿಸಬೇಕು. ಏನೆಂದರೆ ಕೆಲವು ಸಜೀವ ಕ್ರಿಯೆಗಳನ್ನು ನಾವು ನೇರವಾಗಿ ನೋಡಲಾಗುವುದಿಲ್ಲ. ಉದಾಹರಣೆಗೆ ರಕ್ತ ಪರಿಚಲನೆ, ಹೃದಯ ಕೆಲಸ ಮಾಡುವ ಬಗೆ ಅಥವಾ ಶ್ವಾಸಕೋಶಗಳು ಕೆಲಸ ಮಾಡುವ ಬಗೆ. ಇಂತಹ ಸಂದರ್ಭದಲ್ಲಿ ಕಂಪ್ಯೂಟರ್ ಅನಿಮೇಷನ್ ಮೂಲಕ ಈ ಕ್ರಿಯೆಗಳನ್ನು ತೋರಿಸಲೇಬೇಕಾಗುತ್ತವೆ. ಇಂತಹ ಅನಿಮೇಷನ್ ಚಿತ್ರಗಳು ಮಕ್ಕಳ ಕಲಿಕೆಯನ್ನು ಖಂಡಿತವಾಗಿಯೂ ಹೆಚ್ಚಿಸುತ್ತವೆ. ಹಾಗಾಗಿ ಅಧ್ಯಾಪಕರು ಯಾವುದಕ್ಕಾಗಿ ಕಂಪ್ಯೂಟರ್ ಬಳಸಬೇಕು, ಯಾವ ಸಂದರ್ಭದಲ್ಲಿ ಕ್ಯಾಲ್ಕುಲೇಟರ್‌ಗಳನ್ನು ಬಳಸಬೇಕು ಇತ್ಯಾದಿಯಾಗಿ ತಮ್ಮದೇ ನಿಷ್ಕರ್ಷೆಯನ್ನು ಪಡೆಯುವಷ್ಟು ಸ್ವತಂತ್ರಾಲೋಚನೆ ಉಳ್ಳವರಾಗಿರಬೇಕು. ಎಂದರೆ ಅವರಿಗೆ ವಿವೇಕ ಇರಬೇಕು.

ಒಬಾಮಾನ ಶಹಬಾಶ್‌ಗಿರಿ

ಬರಾಕ್ ಒಬಾಮಾ ಅಮೆರಿಕಾದ ಯುವಕರಿಗೆ 'ನೀವೆಲ್ಲ ಬೆಂಗಳೂರಿನ ಯುವಕರಂತಾಗಬೇಕು' ಎಂದು ಹೇಳಿದನಂತೆ. ಇದು ನಮ್ಮ ಬೌದ್ಧಿಕ ವಲಯದಲ್ಲಿ ಸಂಚಲನವನ್ನುಂಟುಮಾಡಿತು. ನಮ್ಮ ಬೆಂಗಳೂರಿನ ಸಾಫ್ಟ್‌ವೇರ್ ಜನಗಳನ್ನು ಒಬಾಮಾ ಹೊಗಳುವುದರಲ್ಲಿ ಮೆಚ್ಚುಗೆಗಿಂತ ಅಮೆರಿಕಾಕ್ಕೆ ಆರ್ಥಿಕ ಲಾಭವೇ ಪ್ರಧಾನವಾಗಿದೆ. ಕಡಿಮೆ ಬೆಲೆಗೆ ಅದ್ಭುತವಾದ ಮೆದುಳಿನಶಕ್ತಿಯನ್ನು ಕೊಳ್ಳುವ ಅವಕಾಶವನ್ನು ಕಾಯ್ದುಕೊಳ್ಳಲು ಕಾಸೂ ಖರ್ಚಿಲ್ಲದೆ ಹೊಗಳಿದರೆ ಸಾಕಲ್ಲವೆ? ಹೀಗೆ ಆರ್ಥಿಕ ಲಾಭವಾಗುತ್ತಿರುವಾಗ ಯಾರು ತಾನೆ ಹೊಗಳುವುದಿಲ್ಲ? ಆದರೆ ಒಂದು ವಿಷಯ ಗಮನಿಸಿ– ಬರಾಕ್ ಒಬಾಮಾನಿಂದ ಶಹಬಾಸ್‌ಗಿರಿ ಪಡೆಯುವ ನಮ್ಮ ಭಾರತೀಯ ಸಾಫ್ಟ್‌ವೇರ್ ಕಂಪನಿಯ ಜಾಣಾಕ್ಷರೆಲ್ಲ ತಾವು ಮಾಡುತ್ತಿರುವ ಸಾಫ್ಟ್‌ವೇರ್ ಬೇರೆ ದೇಶದ ಜನರ ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಹೇಗೆ ಕೆಲಸ ಮಾಡುತ್ತಿದೆ ಎಂದು ತಮ್ಮನ್ನೇ ತಾವು ಪ್ರಶ್ನಿಸಿಕೊಳ್ಳುತ್ತಾರೆಯೆ? ದುಡ್ಡು ಕೊಡುವ 'ಗ್ರಾಹಕ ದೇವರುಗಳು' ಕೇಳಿದ ಸಾಫ್ಟ್‌ವೇರ್ ಮಾಡಿಕೊಡುವುದಷ್ಟೇ ಇವರ ಕೆಲಸ. ಇವರು ಮಾಡಿಕೊಡುವ ಸಾಫ್ಟ್‌ವೇರ್ ಬಳಸಿ ಆ ಪಾಶ್ಚಾತ್ಯರು ತಮಗೆ ಹೊಸ ಅನುಕೂಲತೆಗಳು ದೊರೆಯುತ್ತಿವೆ ಎಂದು ಭ್ರಮಿಸುತ್ತಿರಬಹುದು. ಅಥವಾ ಯಥೇಚ್ಛವಾಗಿ ಹಣ ಇದೆ. ಅದ್ದರಿಂದ ಮತ್ತೂ ಹೆಚ್ಚು ಹೆಚ್ಚು ಅನುಕೂಲಗಳನ್ನು ಪಡೆಯುವ ಭ್ರಮೆಯಿಂದ ಕಾಸು ಬಿಸಾಡಿ ಸಾಫ್ಟ್‌ವೇರ್ ಪಡೆಯುತ್ತಿರಬಹುದು. ಇವರಿಗಾಗಿ ಕೆಲಸ ಮಾಡುವ ನಮ್ಮ ಜನ ಇವರು ಹಣ ಕೊಡುತ್ತಾರೆ ಎಂಬ ಒಂದೇ ಕಾರಣಕ್ಕಾಗಿ

ಅವರು ಕೇಳಿದ್ದನ್ನೆಲ್ಲಾ ಮಾಡಿಕೊಡುವ ಪಾಡು ಪಡುವುದೇಕೆ? ತಮ್ಮ ಅಮೂಲ್ಯ ಕಾಲವನ್ನು ಹರಣ ಮಾಡುವುದೇತಕ್ಕೆ ? ತಮ್ಮದೇ ದೇಶದ ಜನಗಳ ಹಸಿವು ನೀಗಿಸಲು ಇವರಿಗೇಕೆ ಮನಸ್ಸು ಬರುತ್ತಿಲ್ಲ? ಅಥವಾ ನಮ್ಮ ದೇಶದ ವ್ಯವಸ್ಥೆ ಸರಿಪಡಿಸಲು ಇವರು ಸ್ವಯಂಸ್ಫೂರ್ತಿಯಿಂದ ಏಕೆ ಕಾರ್ಯಪ್ರವೃತ್ತರಾಗುತ್ತಿಲ್ಲ? ಅನಗತ್ಯ ಉತ್ಪಾದನೆಗಳು ಜೀವನದ ಗುಣಮಟ್ಟವನ್ನು ಹೇಗೆ ತಾನೆ ಹೆಚ್ಚಿಸುತ್ತವೆ? ಇವು ಮನಸ್ಸನ್ನು ·ಮತ್ತಷ್ಟು ರೋಗಗ್ರಸ್ತವನ್ನಾಗಿಡುತ್ತವೆ ಅಷ್ಟೆ..

ಅನಗತ್ಯ ಸಾಫ್ಟವೇರ್‌ಗಳು ಬದುಕಿನ ಸಹಜಶೀಲತೆಯನ್ನು ಕಸಿಯುವ ಪಾಪದ ಕೆಲಸ. ಈ ಸಾಫ್ಟವೇರ್‌ಗಳು ಶಕ್ತಿಯ ದುಂದುವೆಚ್ಚಕ್ಕೂ ಕಾರಣವಾಗುತ್ತದೆ. ಗ್ರಾಹಕರ ಜೀವನಮಟ್ಟ ಹೆಚ್ಚಿಸುವುದು ಎಂದರೆ ಏನು ಅರ್ಥ? ಇಂದು ಅಮೇರಿಕಾ ಯೂರೋಪ್ ದೇಶಗಳು ತಾವು ಅತಿ ಹೆಚ್ಚು ಬೆಳೆದಿರುವುದನ್ನು ಅರಿತು ಇನ್ನು ಬೆಳೆಯುವುದನ್ನು ನಿಲ್ಲಿಸಬೇಕು ಎಂದು ಚಿಂತಿಸುವ ವಿವೇಕವನ್ನು ಪಡೆದಿದ್ದಾರೆಯೇ? ಹೀಗೆ ಹೆಚ್ಚು, ಮತ್ತೂ ಹೆಚ್ಚು ಬೆಳೆಯುವುದಕ್ಕೆ ಕೊನೆ ಎಂಬುದಿದೆಯೇ? ಇದೊಂದು ವ್ಯಾಧಿಗ್ರಸ್ತ ಮನಸ್ಸು ಎಂದು ಅನ್ನಿಸುವುದಿಲ್ಲವೆ? ಈ ರೋಗಗ್ರಸ್ತ ಮನಸ್ಸುಗಳನ್ನು ತೃಪ್ತಿಪಡಿಸಲು ನಮ್ಮ ದೇಶದ ನೆಲ, ಜಲ, ಯುವಶಕ್ತಿಗಳು ವ್ಯಯವಾಗುವುದು ಬದುಕಿನ ಯಾವ ಗುಣಾತ್ಮಕ ಹೆಚ್ಚಳಕ್ಕೆ ಸಂಬಂಧಪಡುತ್ತದೆ? ಬಡ ಭಾರತೀಯರು ಅತಿ ಕಡಿಮೆ ಬೆಲೆಗೆ ತಮ್ಮ ದುಬಾರಿ ಮೆದುಳಿನ ಶಕ್ತಿಯನ್ನು ಮಾರುತ್ತಾರೆ ಎಂಬುದನ್ನು ಅರಿತೇ ಒಬಾಮಾ ಭಾರತದ ಸಾಫ್ಟ್‌ವೇರ್ ಕಂಪನಿಗಳನ್ನು ಹೊಗಳುತ್ತಾನೆ. ಅವನ ಹೊಗಳಿಕೆಗೆ ಉಬ್ಬಿಹೋಗಿ ನಮ್ಮ ಯುವಕರು ಹಗಲಿರುಳು ಎನ್ನದೆ ಕಷ್ಟಪಟ್ಟು ಸಾಫ್ಟ್‌ವೇರ್ ತಯಾರಿಸಿ ಆ ದೇಶದ ಜನರ ವಿರಾಮ ಹೆಚ್ಚಿಸುವ ಕಾಯಕದಲ್ಲಿ ಏಕೆ ತೊಡಗಬೇಕು? ಇಷ್ಟಾಗಿ ಈ ಆರ್ಥಿಕ ಅಭಿವೃದ್ಧಿಯಿಂದ ನಮ್ಮ ಬಡಜನರಿಗಾದ ಲಾಭವೇನು? ಆದರೆ ಸಮಸ್ಯೆ ಏನೆಂದರೆ ಈ ಕಂಪ್ಯೂಟರ್ ತಾಂತ್ರಿಕತೆಯ ಹುಚ್ಚು ಇಡೀ ದೇಶವನ್ನೇ ಆವರಿಸುತ್ತಿದೆ. ನಮ್ಮ ಶಿಕ್ಷಣ ಇದಕ್ಕೆ ಪೂರಕವಾಗಿದೆ.

ಕಂಪ್ಯೂಟರ್ ಟೆಕ್ನಾಲಜಿ ಮತ್ತು ದೇಶಕಟ್ಟುವ ಕೆಲಸ

ಕಾರ್ಪೋರೇಟ್ ಸಂಸ್ಥೆಗಳಲ್ಲಿ ಕೆಲಸಮಾಡುವ ನಮ್ಮ ಭಾರತೀಯರು ಅಸಾಧಾರಣ ಬುದ್ಧಿಶಾಲಿಗಳು. ಇವರು ಗಳಿಸಿರುವ ವಿದ್ಯೆ, ಬುದ್ಧಿ ಮತ್ತು ಅಗಾಧವಾದ ಕೌಶಲಗಳು ದೇಶ ಕಟ್ಟಲು ಬಳಕೆಯಾದರೆ ಹಿಂದೆಂದೂ ಕಾಣದಂತ ಅದ್ಭುತವಾದ ಬದಲಾವಣೆ ಸಾಧ್ಯ. ಮುಖ್ಯವಾಗಿ ಸರ್ಕಾರಿ ವ್ಯವಸ್ಥೆಯ ಕುಂದುಕೊರತೆಗಳನ್ನು ಈ ಸಂಸ್ಥೆಗಳಲ್ಲಿರುವ ಮಹಾನ್ ಬುದ್ಧಿಶಾಲಿಗಳು ಸರಿಪಡಿಸಲು ನೆರವು ನೀಡಬಹುದು. ಒಂದು ವ್ಯವಸ್ಥೆಯ ಅಡಿಯಲ್ಲಿ ನಡೆಯುವ ಒಪ್ಪಂದಗಳು, ಕರಾರುಗಳು ಹಾಗೂ ಪಾಲಿಸಿ ನಿರ್ಧಾರಗಳು ಇಡೀ ವ್ಯವಸ್ಥೆಯ ಆರೋಗ್ಯಕ್ಕೆ ಪೂರಕವಾಗಿವೆ. ಆದರೆ ಭ್ರಷ್ಟಚಾರ ತಾಂಡವವಾಡುತ್ತಿರುವ

ನಮ್ಮ ವ್ಯವಸ್ಥೆಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಈ ಎಲ್ಲ ಕರಾರುಗಳು ರೂಪುಗೊಳ್ಳುವ ಮೂಲದಲ್ಲೇ ತಾನು ಕೊಳ್ಳೆಹೊಡೆಯಲು ಬೇಕಾದ ಎಲ್ಲ ಅನುಕೂಲಗಳನ್ನು ಅವಕಾಶಗಳನ್ನು ಕಲ್ಪಿಸಿಕೊಳ್ಳುತ್ತವೆ. ಉದಾಹರಣೆಗೆ ನ್ಯಾಶನಲ್ ಮಿನೆರಲ್ ಪಾಲಿಸಿಯನ್ನೆ ತೆಗೆದುಕೊಳ್ಳಿ. ಪುನರ್ನವೀಕರಿಸಲು ಸಾಧ್ಯವಿಲ್ಲದ ಈ ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳುವ ಪಾಲಿಸಿ ಹೇಗಿರಬೇಕು? ಭಾರತ ಸರ್ಕಾರದ ಗಣಿ ಸಚಿವಾಲಯ "ನ್ಯಾಷನಲ್ ಮಿನರಲ್ ಪಾಲಿಸಿ 1993" ಪ್ರಕಟಿಸಿದೆ. ಇದರ ಪ್ರಕಾರ ಭಾರತ ತನ್ನ ಖನಿಜ ಸಂಪತ್ತಿನ ಬಗ್ಗೆ ವೈಜ್ಞಾನಿಕ ಮಾಹಿತಿ ಸಂಗ್ರಹಿಸಬೇಕು ಮತ್ತು ವೈಜ್ಞಾನಿಕವಾಗಿ ಗಣಿಗಾರಿಕೆ ಮಾಡಬೇಕು. ಖನಿಜ ಸಂಪತ್ತು ಪುನರ್‌ನವೀಕರಿಸಲಾಗದ ಸಂಪತ್ತು ಎಂದು ಈ ಕಾರ್ಯನೀತಿ ಮೊದಲೇ ಹೇಳುತ್ತದೆ. ಆದರೆ ಈ ಖನಿಜಗಳನ್ನು ಬುದ್ಧಿಪೂರ್ವಕವಾಗಿ ಬಳಸುವುದು ಎಂದರೆ 'ಮುಂದಿನ ಉಪಯೋಗಕ್ಕೆ ಬೇಕೆಂದು ಉಳಿಸುವುದು ಎಂಬ ಸಂಕುಚಿತ ಅರ್ಥದಲ್ಲಿ ಅಲ್ಲ' ಎಂದು ವಿವರಣೆ ನೀಡುತ್ತದೆ. ಪುನರ್‌ನವೀಕರಿಸಲಾಗದ ಅಮೂಲ್ಯ ಖನಿಜಗಳನ್ನು ಮುಂದಿನ ಬಳಕೆಗಾಗಿ ಉಳಿಸಿಕೊಳ್ಳುವುದು ಸಂಕುಚಿತ ಅರ್ಥ ಹೇಗಾದೀತು? ಈ ವಿವರಣೆಯಲ್ಲಿ ಕೊಳ್ಳೆಹೊಡೆಯುವ ಹುನ್ನಾರ ಇರುವುದು ಸ್ಪಷ್ಟವಾಗುವುದಿಲ್ಲವೆ? ಇದು ಬೇಲಿಯೆ ಎದ್ದು ಹೊಲ ಮೇಯ್ದಂತೆ. ಮುಂದಿನ ಪೀಳಿಗೆಗೆ ಈ ಅಮೂಲ್ಯ ಖನಿಜ ಸಂಪತ್ತು ಉಳಿಸಬೇಕು ಎಂಬುದು "ಸಂಕುಚಿತ ಅರ್ಥ" ಎಂಬ ವ್ಯಾಖ್ಯಾನದ ಹಿಂದಿರುವ ಉದ್ದೇಶವಾದರೂ ಏನು? ಇಂತಹ ಒಂದು ಪಾಲಿಸಿ ರಚಿಸಬೇಕಾದರೆ ಈ ವ್ಯವಹಾರಗಳಿಗೆ ನೇರ ಸಂಬಂಧವಿರದ ತಟಸ್ಥವಲಯದ ಬುದ್ಧಿವಂತನೊಬ್ಬ ಪಾಲ್ಗೊಂಡರೆ ಇಂತಹ ವಂಚನೆಯನ್ನಾದರೂ ತಡೆಗಟ್ಟಬಹುದು. ಅಲ್ಲದೆ ಬೃಹತ್ ಆರ್ಥಿಕ ವ್ಯವಹಾರಗಳು ಸರ್ಕಾರ ಮತ್ತು ಗುತ್ತಿಗೆದಾರರ ನಡುವೆ ಎಲ್ಲೆಲ್ಲಿ ನಡೆಯುತ್ತದೆಯೋ ಅ ಎಲ್ಲ ಕರಾರು ಪತ್ರಗಳನ್ನು ಕಾರ್ಪೊರೇಟ್ ಸಂಸ್ಥೆಗಳ ಬುದ್ಧಿಶಾಲಿ ಜನರಿಂದ ಲೋಪವಿಲ್ಲದಂತೆ ಮಾಡಿಸಲು ಸಾಧ್ಯವಿದೆ. ಇದನ್ನು ಸರ್ಕಾರ ಒಪ್ಪಬೇಕು ಮತ್ತು ಈ ಕೆಲಸವನ್ನು ಬಹಳ ಗಂಭೀರವಾಗಿ ಕಾರ್ಪೊರೇಟ್ ಸಂಸ್ಥೆಗಳು ತೆಗೆದುಕೊಂಡು ಈ ಕೆಲಸಕ್ಕಾಗಿಯೇ ಒಂದು ದೊಡ್ಡ ಶಾಖೆಯನ್ನು ತೆರೆದು ಹೊಸದಾಗಿ ಇಡೀ ದೇಶವನ್ನು ಕಟ್ಟುವ ಕೆಲಸ ಪ್ರಾರಂಭವಾಗಬೇಕು. ತಂತ್ರಜ್ಞಾನವನ್ನು ಭ್ರಷ್ಟಚಾರ ನಿರ್ಮೂಲನೆಗೆ ನಾವು ಯಶಸ್ವಿಯಾಗಿ ಬಳಸಿಕೊಂಡಿಲ್ಲ. ಇದಕ್ಕೆ ಒಪ್ಪುವಂತೆ ಸರ್ಕಾರದ ಮೇಲೆ ನಾವು ಒತ್ತಾಯ ಹಾಕಬೇಕು. ಜೊತೆಗೆ ಈ ಕೆಲಸದಲ್ಲಿ ನೆರವಾಗಲು ಮಾಹಿತಿ ತಂತ್ರಜ್ಞಾನದ ಕಾರ್ಪೊರೇಟ್ ವಲಯಗಳು ಸ್ವಯಂಸ್ಫೂರ್ತಿಯಿಂದ ಮುಂದಾಗಬೇಕು.

ಅಜೀಮ್ ಪ್ರೇಮ್‌ಜಿಯಂತಹ ಸಾಫ್ಟ್‌ವೇರ್ ದಿಗ್ಗಜರು ಶಿಕ್ಷಣದ ಮೂಲಕ ಅಭಿವೃದ್ಧಿಗಾಗಿ ಈಗಾಗಲೇ ಶ್ರಮಿಸುತ್ತಿರುವುದು ಸ್ತುತ್ಯರ್ಹ. ಹೈದ್ರಾಬಾದ್-ಕರ್ನಾಟಕದ ಸ್ಥಿತಿಯನ್ನು ಕಂಡು ಅವರು ಮಮ್ಮಲ ಮರುಗಿದರು. ಇದು ನನಗೆ ಅಪರಾಧಿ ಪ್ರಜ್ಞೆಯಾಗಿ ಕಾಡುತ್ತಿದೆ ಎಂದರು. ಆದರೆ ಆ ಪ್ರದೇಶದಿಂದಲೇ ಗೆದ್ದುಬಂದ ನಮ್ಮ ಜನಪ್ರತಿನಿಧಿಗಳಿಗೆ

ಹೀಗೇನೂ ಅನ್ನಿಸಲೇ ಇಲ್ಲ. ಮೇಲಾಗಿ ಬಡತನ, ಅನಕ್ಷರತೆ ಮತ್ತು ದೌರ್ಬಲ್ಯಗಳೇ ಇವರ ಗೆಲುವಿಗೆ ಬಂಡವಾಳವಾಯಿತು. ಭ್ರಷ್ಟಗೊಂಡಿರುವ ನಮ್ಮ ಸರ್ಕಾರೀ ವ್ಯವಸ್ಥೆಯೊಳಗೆ ಅಸಹ್ಯಪಡದೆ ನುಗ್ಗಿ ಅದನ್ನು ಸರಿಪಡಿಸಲು ಪ್ರಯತ್ನಿಸುವವರು ಇನ್ನೂ ಯಾರೂ ಕಾಣುತ್ತಿಲ್ಲ. ಹಾಗೆಯೇ ಕನ್ನಡದ ತಂತ್ರಾಂಶದಂತಹ ಸಮಸ್ಯೆಯನ್ನೇ ತೆಗೆದುಕೊಳ್ಳಿ. ನಮ್ಮ ಸಾಫ್ಟ್‌ವೇರ್ ದಿಗ್ಗಜರು ಇದನ್ನು ಸುಲಭವಾಗಿ ಮಾಡಿ ಮುಗಿಸಬಹುದಾಗಿತ್ತು. ಆದರೆ ಇದು ತಮ್ಮ ಬೃಹತ್ ಸಂಸ್ಥೆಗೆ ತೀರಾ ಸಣ್ಣ ಕೆಲಸವೆಂದೂ, ಇದನ್ನು ಯಾರಾದರೂ ಸಣ್ಣವರು ಮಾಡಬಹುದೆಂದೂ ಹೇಳುತ್ತ ತಮ್ಮ ಹಿರಿತನವನ್ನು ಮೆರೆವ ದಿಗ್ಗಜರಿದ್ದಾರೆಯೇ ಹೊರತು ಅಹಂಕಾರವನ್ನು ಬದಿಗಿಟ್ಟು ತಮ್ಮದೇ ನೆಲಜಲದ ಭಾಷೆಗೆ ಕಿಂಚಿತ್ ಕೊಡುಗೆ ಕೊಡಬೇಕೆಂದು ಇವರಿಗೆ ಅನ್ನಿಸುತ್ತಲೇ ಇಲ್ಲ. ಇಂತಹ 'ಯಶಸ್ವೀ' ದಿಗ್ಗಜರು ನಮ್ಮ ಶಿಕ್ಷಣದ ರೂಪುರೇಖೆಗಳ ಬಗೆಗೆ ಸಲಹೆನೀಡುತ್ತಾರೆ!